ಸಂಚಿಕೆ
೦೨
ಜನವರಿ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಬೃಂದಾವನ

Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೦೨
ಜನವರಿ ೨೦೧೬

# ಬೃಂದಾವನ ವಾಣಿ

## ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



### ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಪುಟಾಣಿ ಪ್ರಪಂಚ | ಪು ೧೧ |
| ಓದುಗರ ಓಲೆಗಳು | ಪು ೨- ೩ | ವನಿತಾವಾಣಿ, ಪ್ರತಿಭೆ | ಪು ೧೨ - ೧೪ |
| ಹಿನ್ನೋಟ | ಪು ೪ | ಸುತ್ತ ಮುತ್ತ | ಪು ೧೫ |
| ಯುವವಾಣಿ | ಪು ೫ | ಕ್ಯಾಮೆರಾ ಕಣ್ಣಿಂದ | ಪು ೧೫ |
| ವ್ಯಕ್ತಿ ಪರಿಚಯ | ಪು ೬ | ಹಾಗೆ ಸುಮ್ಮನೆ... | ಪು ೧೬ |
| ಸಾಹಿತ್ಯ ವಾಣಿ | ಪು ೭ - ೧೦ | ಮುನ್ನೋಟ | ಪು ೧೭ |



**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ಸರಿತಾ ನವಲಿ
ಸಂಪಾದಕರು


ಅಹೀಶ್ ಭಾರದ್ವಾಜ
ಸಂಪಾದಕ ವರ್ಗ


ಡಾ. ಅಶೋಕ್ ಕಟ್ಟೀಮನಿ
ಸಂಪಾದಕ ವರ್ಗ


ಕಾವ್ಯಾ ಕಡಮೆ
ನಾಗರಕಟ್ಟೆ
ಸಂಪಾದಕ ವರ್ಗ


ರಾಘವೇಂದ್ರ
ಕುಂದಲಗುರ್ಕಿ
ಸಂಪಾದಕ ವರ್ಗ


ಕೇಶವ ಪ್ರಶಾಂತ್
ಸಂಪಾದಕ ವರ್ಗ



ಮುಖಪುಟ ಚಿತ್ರ: ಕೆ. ಆರ್. ವೃತ್ತ , ಮೈಸೂರು
ಕೃಪೆ: ವಿನೋದ್ ಶಾಮಸುಂದರ್

ಸಂಪಾದಕೀಯ ಪುಟ ಚಿತ್ರ: ಮೈಸೂರು ಅರಮನೆ ದ್ವಾರ
ಕೃಪೆ: ವಿನೋದ್ ಶಾಮಸುಂದರ್

ಪತ್ರಿಕೆ ವಿನ್ಯಾಸ:
ಅಹೀಶ್ ಭಾರದ್ವಾಜ
ಕೇಶವ ಪ್ರಶಾಂತ್


## ಅಧ್ಯಕ್ಷರ ಮಾತು.....



**ನ್ಯೂ ಜೆರ್ಸಿ ಕನ್ನಡ ಬಾಂಧವರಿಗೆ ನನ್ನ ನಮಸ್ಕಾರಗಳು,**

ಬೃಂದಾವನ ವಾಣಿಯ ಎರಡನೆ ಸಂಚಿಕೆಗೆ ಕಾತುರದಿಂದ ನೀವೆಲ್ಲ ಕಾಯುತ್ತಿರಬೇಕು. ಬೃಂದಾವನ ವಾಣಿಯ ಉತ್ಕೃಷ್ಟ ಮಟ್ಟ ಮತ್ತು ಪರಿಪೂರ್ಣತೆ ಬಗ್ಗೆ ವಿಶೇಷ ಪ್ರತಿಕ್ರಿಯೆ ಬಂದಿದೆ. ನಮ್ಮ ಬೃಂದಾವನ "ವಾಣಿ" ತಂಡಕ್ಕೆ ನನ್ನ ಶುಭಾಶಯಗಳು.

ಬೃಂದಾವನ ಮಿಲನ ತಂಡ, "ಬೃಂದಾವನ"ದ ಕೈಂಕರ್ಯ ಹೊತ್ತು ಒಂದು ವರ್ಷ ಪೂರ್ಣವಾಯಿತು. ಒಂದು ವರ್ಷದಲ್ಲಿ ಉತ್ಸಾಹಿ ಮಿಲನ ತಂಡ ಹೊಸ ಆಯಾಮ ತಂದಿದೆ ಎಂಬ ಹೆಮ್ಮೆ ನಮಗಿದೆ. ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನಲ್ಲದೆ, ಹೊಸ ಚಟುವಟಿಕೆಗಳನ್ನು ಹಮ್ಮಿಕೊಂಡು ನ್ಯೂ ಜೆರ್ಸಿಯ ಕನ್ನಡ, ಕನ್ನಡಿಗರ ಸೇವೆಯಲ್ಲಿ ತೊಡಗಿಸಿಕೊಂಡು ಸೈ ಎನಿಸಿಕೊಂಡಿದೆ.

* ನಗೆ ಹಬ್ಬದಂದು ಪರಿಚಯಿಸಿದ ಮೊದಲ ಪ್ರಯತ್ನ "ಬೃಂದಾವನ ಅಕ್ಷರ ಭಂಡಾರ" ಕನ್ನಡ ಇ-ಲೈಬ್ರರಿ ಚಾಲನೆ ಹೊಂದಿತು. ಕನ್ನಡ ಪುಸ್ತಕಗಳು ಪ್ರತಿ ಕಾರ್ಯಕ್ರಮದಲ್ಲಿ ಪರಸ್ಪರ ಕೈ ಬದಲಾದವು. 'ವಾಟ್ಸಾಪ್'ನಲ್ಲಿ ಪುಸ್ತಕ ಸಂವಾದ ಭರದಿಂದ ನಡೆದಿದೆ.
* ವಸಂತೋತ್ಸವದಲ್ಲಿ ಯುವ ಬೃಂದಾವನಕ್ಕೆ ರೆಕ್ಕೆ ಮೂಡಿತು. ಪ್ರತಿ ಬೃಂದಾವನ ಕಾರ್ಯಕ್ರಮದಲ್ಲಿ ನಮ್ಮ ಕನ್ನಡ ಯುವಕರು entrepreneurship, ಯೋಗ, ಯುವ ಬೃಂದಾವನ ಓಟ, ಮಕ್ಕಳ ಗಣೇಶ ಹಬ್ಬ, pave your way to college, ವರ್ಷದ ಕೊನೆಯಲ್ಲಿ ಪೂರ್ಣ ದಿನದ ಯುವ ಬೃಂದಾವನ ಕಾನ್ಫರೆನ್ಸ್ ಏರ್ಪಡಿಸಿ, ಉತ್ತಮ ಕಾರ್ಯಕ್ರಮಗಳನ್ನು ನಮ್ಮ ಕನ್ನಡ ಮಕ್ಕಳಿಗಾಗಿ ಹಮ್ಮಿಕೊಂಡರು.
* ಗಣೇಶ ಹಬ್ಬದಂದು "ಸಾಹಿತ್ಯ ಬೃಂದಾವನ" ಪರಿಚಯಿಸಿ, ಕನ್ನಡದ ಅತಿರಥ ಕವಿಗಳೊಂದಿಗೆ, ನ್ಯೂ ಜೆರ್ಸಿಯ ಸಾಮಾನ್ಯ ಕನ್ನಡಿಗರ ಒಂದು ಅವಿಸ್ಮರಣೀಯ ಸಂವಾದ ನಡೆಯಿತು. ಕನ್ನಡ ಸಾಹಿತ್ಯ ಪ್ರೇರಿತ ಈ ತಂಡ ಬೃಂದಾವನ ವಾಣಿಯ ಚುಕ್ಕಾಣಿ ಹಿಡಿದು "ವಾಣಿ ಈ-ಪತ್ರಿಕೆ" ನ-1 ಚಾಲನೆ ಮಾಡಿತು ಮತ್ತು ಬೃಂದಾವನ ಕನ್ನಡ ರಾಜ್ಯೋತ್ಸವದಂದು ನ್ಯೂ ಜೆರ್ಸಿಯ ಚೊಚ್ಚಲ ಕವಿಗೋಷ್ಠಿಯಲ್ಲಿ ಕನ್ನಡದಲ್ಲಿ ಕವಿತೆ ಬರೆದು ಸಹೃದಯರೊಡನೆ ಹಂಚಿಕೊಂಡರು.
* ನ್ಯೂ ಜೆರ್ಸಿಯಲ್ಲಿ ಕನ್ನಡ ಶಾಲೆ ಬೃಂದಾವನ ಮಿಲನ ತಂಡದ ದೊಡ್ಡ ಕನಸು. ಡಾ. ಅಶೋಕ್ ಕಟ್ಟಿಮನಿಯವರ ನೇತ್ರತ್ವದಲ್ಲಿ ಸರಳ ಕನ್ನಡ ಕಲಿಕಾ ವಿಧಾನ (ಸಕವಿ) ಅಡವಳಿಸಿ ಸೌತ್ ಬ್ರುನ್ಸ್ವಿಕ್ಕ್ ನಲ್ಲಿ ನ-7 ರಂದು ೪೦ ಮಕ್ಕಳು ಸೇರಿ ಮೊದಲ ಕನ್ನಡ ಶಾಲೆ ಚಾಲನೆ ಹೊಂದಿತು. ಕನ್ನಡ ರಾಜ್ಯೋತ್ಸವದಂದು ಶಾಲೆಯ ಮಕ್ಕಳು ಸಂಕೇತ ಗೀತೆ ಹಾಡಿದಾಗ ಹೆಮ್ಮೆಯಾಯಿತು.

೨೦೧೫ ರ ಬೃಂದಾವನ ಕನ್ನಡಿಗರ ಸೇವಾ ಅವಕಾಶ ನಮಗೆ ಸಂತೋಷ ತಂದಿದೆ. ನಿಮಗೂ ಖುಷಿಯಾಗಿದೆ ಎಂದು ಆಶಿಸುತ್ತೇವೆ.

ನಿಮಗೆಲ್ಲರಿಗೂ ಹೊಸ ವರುಷ ಹರುಷ ತರಲಿ ಎಂದು ಹಾರೈಸುತ್ತೇವೆ.

**-ಮಲ್ಲಿಕ್ ಪ್ರಸಾದ್** ಅಧ್ಯಕ್ಷರು, ಬೃಂದಾವನ

## ಪ್ರಧಾನ ಸಂಪಾದಕರಿಂದ......

**ಪ್ರೀತಿಯ ಬೃಂದಾವನ ವಾಣಿ ಓದುಗರಿಗೆ ಹೊಸ ವರ್ಷದ ಶುಭಾಶಯಗಳು !!!**

ಈ ಸಂತೋಷವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು.

ಕಳೆದ ಬಾರಿ ಮೊದಲನೆಯ ಸಂಚಿಕೆಯ ಬಿಡುಗಡೆಯ ಸಮಯ ಸಂಜೆ ೬ ಘಂಟೆ, ನವಂಬರ್ ೧ ಕನ್ನಡ ರಾಜ್ಯೋತ್ಸವ ದಿನ. ಹಿಂದಿನ ಎರಡು ದಿನಗಳಿಂದ ಹಗಲಿರುಳು ಬೃಂದಾವನ ವಾಣಿಯನ್ನು ರೂಪಿಸಲು ಶ್ರಮಿಸಿದ ತಂಡದ ಸದಸ್ಯರೆಲ್ಲ ತುಂಬ ದುಗುಡದಲ್ಲಿ ಇದ್ದೆವು. ಓದುಗರು ನಮ್ಮ ಈ ಪ್ರಯತ್ನವನ್ನು ಹೇಗೆ ಸ್ವೀಕರಿಸುತ್ತಾರೋ ಎನ್ನುವ ಆತಂಕ ಎಲ್ಲರಲ್ಲಿತ್ತು . ಆದರೆ ನೀವು ತೋರಿದ ಅಭಿಮಾನ ನಮ್ಮ ಊಹೆಗೆ ಮೀರಿದ್ದಾಗಿತ್ತು .ನಂತರ ನಡೆದದ್ದು ವಿಜಯೋತ್ಸವ. ಕೆಲವೇ ಕ್ಷಣಗಳಲ್ಲಿ ನಮ್ಮ ನಿರೀಕ್ಷೆಗೂ ಮೀರಿ ಅಭಿನಂದನೆಯ ಮಹಾಪೂರವೇ ಹರಿದು ಬಂತು. ನಿಮ್ಮ ಪ್ರೀತಿ, ವಿಶ್ವಾಸಕ್ಕೆ ನಾವು ಚಿರಋಣಿ. ಆ ರಾತ್ರಿ, ನಮ್ಮ ಇಡಿ ಶ್ರಮವೆಲ್ಲ ಸಾರ್ಥಕವೆನಿಸಿತು, ತಂಡದ ಯಾರಿಗೂ ಮಾತು ಬೇಕಾಗಿರಲಿಲ್ಲ. ಫೋನಿನಲ್ಲಿ ಖುಷಿಯ ನಗುವಿನೊಂದಿಗೆ ಸಂತೋಷವನ್ನು ಹಂಚಿಕೊಂಡೆವು. ಅದೊಂದು ಅಪೂರ್ವ ಘಳಿಗೆ. ಇದರೊಂದಿಗೆ ನಮ್ಮ ಜವಾಬ್ದಾರಿಯೂ ಹೆಚ್ಚಾಗಿದೆ, 'ವಾಣಿ'ಯನ್ನು ಇನ್ನೂ ಉತ್ಕೃಷ್ಟವಾಗಿ ರೂಪಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ಇನ್ನೊಂದು ವಿಷಯ,

ಅಮೇರಿಕಾದ ಮಿನೆಸೋಟಾ ರಾಜ್ಯದಲ್ಲಿ ನೆಲೆಸಿರುವ ಡಾ.ಗುರುಪ್ರಸಾದ ಕಾಗಿನೆಲೆ, ವೃತ್ತಿಯಲ್ಲಿ ವೈದ್ಯರು. ಕಥೆಗಾರರಾಗಿ, ಕಾದಂಬರಿಕಾರರಾಗಿ ಕನ್ನಡ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.ಅಲ್ಲದೇ ನನ್ನ ಮೆಚ್ಚಿನ ಲೇಖಕರಲ್ಲೊಬ್ಬರು. ತುಂಬ ಸಂತೋಷದಿಂದ ಈ ಸಂಚಿಕೆಗೆ ಸಂದರ್ಶನ ಕೊಟ್ಟಿದ್ದಾರೆ.ಬೃಂದಾವನ ತಂಡದ ಪರವಾಗಿ ಅವರಿಗೆ ಧನ್ಯವಾದಗಳು. ಈ ಎರಡನೆ ಸಂಚಿಕೆಯನ್ನು ಪ್ರೀತಿಯಿಂದ ರೂಪಿಸಿದ 'ವಾಣಿ' ತಂಡದ ಎಲ್ಲರಿಗೂ ನನ್ನ ವಂದನೆಗಳು. ಮುಂದಿನ ಸಂಚಿಕೆಯಲ್ಲಿ ಸಿಗೋಣ. - **ಸತ್ಯ ಪ್ರಸಾದ**

## ಸಂಪಾದಕರಿಂದ......

**ನ್ಯೂ ಜೆರ್ಸಿ ಮತ್ತು ಸಮಸ್ತ ಕನ್ನಡ ಬಳಗಕ್ಕೆ ನಮಸ್ಕಾರಗಳು. ಹೊಸ ವರುಷ ೨೦೧೬ ರ ಹಾರ್ದಿಕ ಶುಭಾಶಯಗಳು !!**

ಬೃಂದಾವನ ವಾಣಿಯ ಮೊದಲನೇ ಸಂಚಿಕೆಯನ್ನು ನೀವೆಲ್ಲ ಓದಿ , ಮೆಚ್ಚಿದ್ದಕ್ಕೆ, ವಾಣಿಯ ಸಂಪಾದಕ ತಂಡದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

ನಿಮ್ಮ ಸಲಹೆ ಮತ್ತು ಅನಿಸಿಕೆಗಳನ್ನು ತುಂಬು ಹೃದಯದಿಂದ ಸ್ವೀಕರಿಸಿ , ಮುಂಬರುವ ಸಂಚಿಕೆಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

ನ್ಯೂ ಜೆರ್ಸಿಯ 'ಬೃಂದಾವನ' - ಕನ್ನಡ ಕೂಟದ ಪರವಾಗಿ, ಕನ್ನಡದ ಸೇವೆಯನ್ನು ಧ್ಯೇಯವಾಗಿಸಿಕೊಂಡು, ಮೊದಲ ಹೆಜ್ಜೆಯನ್ನಿಟ್ಟ ಬೃಂದಾವನ-ವಾಣಿ ,ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ , ನ್ಯೂ ಜೆರ್ಸಿ ಕನ್ನಡ ಬಳಗದ ಕನ್ನಡ ಸೇವಯನ್ನು ಸಾರುವ ಸುಂದರ ಮಾಧ್ಯಮ-ವಾಗಬೇಕೆಂಬುದು ನಮ್ಮ ಆಶಯ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಕವನದ ಸಾಲುಗಳು ಹೇಳುವಂತೆ,

**“ ಎಲ್ಲಿದ್ದರು ಎಂತಿದ್ದರು
ಕನ್ನಡಿಗರು ನಾವು
ಕಡಲಾಚೆಯ ಕನ್ನಡ ಕುಲ ನಾವು
ದೇಶ ದೇಶಗಳ ಗಡಿಗಳ ದಾಟುತ
ನೆಲೆಸಿದರೂ ನಾವು
ಭುವನತ್ರಯವೇ ಸ್ವದೇಶವೆನ್ನುತ
ಬದುಕಿದರೂ ನಾವು
ಅಂತರಾಳದ ಒಂಟಿತನದೊಳಗೆ
ಕಾಡುತ್ತಿದೆ ಕನ್ನಡ ನಾಡು ”.**

ನಿಜ , ಅಂತರಾಳದಲ್ಲಿ ಕಾಡುವ ನಮ್ಮ ಕನ್ನಡ ನಾಡು , ಕಥೆಯಾಗಿ, ಕವಿತೆಯಾಗಿ,ಲೇಖನವಾಗಿ,ಸಂಪ್ರದಾಯ ಸಾರುವ ಸುಂದರ ಚಿತ್ರಗಳಾಗಿ , ಬೃಂದಾವನ ವಾಣಿಯ ಅಂಕಣಗಳಲ್ಲಿ ಮೂಡಿಬರಲಿ.

ನಿಮ್ಮ ಅನಿಸಿಕೆ,ಸಲಹೆಗಳಿಗೆ ಸದಾ ಸ್ವಾಗತ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗೋಣ.

**-ಸರಿತಾ ನವಲಿ.**


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# ಓದುಗರ ಓಲೆಗಳು

ಬೃಂದಾವನ ವಾಣಿ ತಂಡಕ್ಕೆ ಅಭಿನಂದನೆಗಳು !!!
ನಿಮ್ಮ ಮೊದಲನೇ ಸಂಚಿಕೆ ನೋಡಿದೆ.ತುಂಬಾ ಸೊಗಸಾಗಿ ಮೂಡಿಬಂದಿದೆ. ಯಾವುದೇ ರಾಜಿಯಿಲ್ಲದೆ ವಿಷಯ ,ವಿನ್ಯಾಸ ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದೀರಿ. ಯಾವ ವೃತ್ತಿಪರ ಸಂಚಿಕೆಗೂ ಕಡಿಮೆಯಿಲ್ಲ. ನಿಮ್ಮ ಕನ್ನಡದ ಕೆಲಸ ಹೀಗೆ ಮುಂದುವರಿಯಲೆಂದು ಹಾರೈಸುವ,

**ರಾಜ್ ಪಾಟಿಲ್**
**ಅಕ್ಕ ಅಧ್ಯಕ್ಷರು( ಅಕ್ಕ ಕಾರ್ಯಕಾರಿ ಸಮಿತಿ ೧೫-೧೬)**

ತುಂಬಾ ಚೆಂದವಾಗಿ ಮೂಡಿ
ಬಂದಿದೆ" ಬೃಂದಾವನ ವಾಣಿ"...
ಕನ್ನಡ ಸಾಹಿತ್ಯ , ಕಲೆ - ಸಂಸ್ಕೃತಿಯ ಸೇವೆ ಮಾಡುತಿಹ
ಬೃಂದಾವನ ಕೂಟ ,ಆಗಲಿದೆ ಮುಂದೊಮ್ಮೆ
ಕನ್ನಡಮ್ಮನ ಮುಕುಟ ಮಣಿ ...!
ನಿಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

**ನಾಗರಾಜ್.ಎಂ (ಇಂಚರ)**

ಬೃಂದಾವನ ವಾಣಿಯ ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು ಹಾಗು ನಮ್ಮ ಕೃತಜ್ಞತೆಗಳು.
ನಿಮ್ಮ ಮೊದಲನೆಯ ಸಂಚಿಕೆಯಲ್ಲಿ ಪ್ರಕಟವಾದ ವಿಚಾರ , ವಿಷಯ ,ಕಾವ್ಯ ,ಚಿಣ್ಣರ ಲೋಕ ಬಹಳ ಸೊಗಸಾಗಿ ಮೂಡಿ ಬಂದಿದೆ.
ನಿಮ್ಮೆಲ್ಲರ ಪ್ರಯತ್ನ ವಿಜಯಶಾಲಿಯಾಗಲಿ ,ಕನ್ನಡದ ಡಿಂಡಿಮವು ಮನೆ ಮನೆಯಲ್ಲಿ ಬಾರಿಸಲಿ ಎಂದು ಆಶಿಸುತ್ತೇನೆ.

**ಮಹೇಶ್ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಬಹಳ ಸುಂದರವಾಗಿದೆ.
ಸಂಪಾದಕರುಗಳ ತಯಾರಿ ,ಪರಿಶ್ರಮ ಹಾಗೂ ಅಚ್ಚುಕಟ್ಟಿನ ಮೇಲಿನ ಧ್ಯಾನ ಎದ್ದು ತೋರುತ್ತದೆ.
ಹೃದ್ಪೂರ್ವಕ ಅಭಿನಂದನೆಗಳು.

**ಅನಿಲ್ ಭಾರದ್ವಾಜ (ನ್ಯೂ ಜೆರ್ಸಿ)**

ಸಂಪಾದಕ ಮಂಡಳಿಗೆ ಅಭಿನಂದನೆಗಳು.
ಸಂಚಿಕೆ ಚೆನ್ನಾಗಿದೆ.

**ಸೀತಾರಾಮ್ (ಬೆಂಗಳೂರು)**

ಮೊದಲ ಸಂಚಿಕೆ ಬಹಳ ಸುಂದರವಾಗಿ ಮೂಡಿ ಬಂದಿದೆ.
ಬೃಂದಾವನ ವಾಣಿಯ ಸಂಪಾದಕ ಹಾಗು ಲೇಖಕರ ಬಳಗಕ್ಕೆ ಅಭಿನಂದನೆಗಳು.

**ಸುಬ್ರಹ್ಮಣ್ಯ ಹಿಟ್ಟುವಳ್ಳಿ (ಚೆನ್ನೈ)**

ಬೃಂದಾವನ ವಾಣಿಯ ಸಂಪಾದಕ ವರ್ಗಕ್ಕೆ ನಮಸ್ಕಾರ,

ನಿಮ್ಮ *ಬೃಂದಾವನ* *ವಾಣಿ*ಯ ಪ್ರಪ್ರಥಮ ಪತ್ರಿಕೆಯ ಪಿಡಿಎಫ್ ಪ್ರತಿಯನ್ನು ಶ್ರೀವತ್ಸ ಜೋಷಿಯವರು ಈ-ಮೇಲ್ ಮುಖಾಂತರ ಕಳುಹಿಸಿದ್ದರು. ಪತ್ರಿಕೆಯನ್ನು ನೋಡಿದೆ. ಮುಖ್ಯವಾಗಿ ,ಓದಿದೆ..
*ಬೃಂದಾವನ* *ವಾಣಿ *ತುಂಬಾ ಚೆನ್ನಾಗಿ ಮೂಡಿ ಬಂದಿದೆ. ನಿಮ್ಮೆಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು!
ನೀವೆಲ್ಲಾ ಬಹಳ ಉತ್ಸಾಹ ಮತ್ತು ಆಸಕ್ತಿಯಿಂದ ಈ ದ್ವೈಮಾಸಿಕ ಪತ್ರಿಕೆಯ ಪ್ರಕಟಣೆ ಕೈಗೊಂಡಿರುವುದು, ಪತ್ರಿಕೆಯ ಅಂದ – ಚೆಂದದಲ್ಲಿ ಮತ್ತು ಅದರಲ್ಲಿ ಪ್ರಕಟವಾಗಿರುವ ಸುದ್ದಿ ,ಲೇಖನ ,ವಿಚಾರಗಳಲ್ಲಿ ಎದ್ದು ತೋರುತ್ತದೆ.ಪ್ರತಿಯೊಂದು ಸಂಘ ,ಸಂಸ್ಥೆಗೆ ಇಂತಹ ಪತ್ರಿಕೆ ಅತ್ಯವಶ್ಯಕ. ಈ ಪತ್ರಿಕೆ ಪ್ರಕಟಿಸುವುದರಲ್ಲಿನ ನಿಮ್ಮ ಉತ್ಸಾಹ ,ಆಸಕ್ತಿ ಮತ್ತು ಶ್ರದ್ಧೆ ಮುಂದುವರೆಯಲಿ. ಇಂತಹ ಉಪಯುಕ್ತವಾದ ಕನ್ನಡ ಕಾರ್ಯ ನಿರಂತರವಾಗಿ ನೆರವೇರಲಿ.

ವಿಶ್ವಾಸದಲ್ಲಿ ನಿಮ್ಮವ,

**ಅರುಣ್ ಮೂರ್ತಿ (ಶಿಕ್ಯಾಗೊಲ್ಯಾಂಡ್)**

ಬೃಂದಾವನ ವಾಣಿ ಅತಿ ಸುಂದರವಾಗಿ ಮೂಡಿ ಬಂದಿದೆ.
ಅದಕ್ಕೆ ಕಾರಣಕರ್ತರಾದ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ಅಭಿನಂದನೆಗಳು.

**ಸುಷಮಾ ಶ್ರೇಯಸ್ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಬಹಳ ಸರಳ ಮತ್ತು ಸ್ವಾರಸ್ಯಕರವಾಗಿ ಹೊರಹೊಮ್ಮುತ್ತಿದೆ. ಇದರ ಸಂಪಾದಕರಿಗೆ ಮತ್ತು ಬರಹಗಾರರಿಗೆ ಧನ್ಯವಾದಗಳು !!!

**ವಿನೋದ್ ಶಾಮಸುಂದರ್ (ನ್ಯೂ ಜೆರ್ಸಿ)**

ನಿಮ್ಮ ಹೊಸ ರುಚಿ 'ಸೇಬು ಹಲ್ವ' ತುಂಬ ಚೆನ್ನಾಗಿದೆ, ಮಾಡುವ ವಿಧಾನವನ್ನು ತಿಳಿಸಿ ಕೊಟ್ಟಿದ್ದಕ್ಕೆ ಧನ್ಯವಾದಗಳು !!! ನಮ್ಮ ಸ್ನೇಹಿತರೆಲ್ಲರೂ ತುಂಬಾ ಇಷ್ಟಪಟ್ಟರು. ನಿಮ್ಮ ಬೃಂದಾವನ ವಾಣಿ ಕೂಡ 'ಸೇಬು ಹಲ್ವ' -ದಷ್ಟೇ ರುಚಿಕರವಾಗಿದೆ !!!
**ಪ್ರೀತಿ ಮುನಿಕುಮಾರ್ (ವರ್ಜೀನಿಯಾ)**

ಬೃಂದಾವನ ವಾಣಿ ಪತ್ರಿಕೆ ನೋಡಲು ಆಕರ್ಷಕವಾಗಿ ಮತ್ತು ಓದಲು ಸುಲಭವಾಗಿ ಹಾಗು ಆಸಕ್ತಿ ಉಂಟು ಮಾಡುವಹಾಗೆ ಮೂಡಿಬಂದಿದೆ. ಇದರ ಸಫಲತೆಗೆ ಕಾರಣರಾದ ಬೃಂದಾವನ ವಾಣಿ ಸಂಪಾದಕರು ಮತ್ತು ಲೇಖನ ಕಳುಹಿಸಿದ ಎಲ್ಲಾ ಕನ್ನಡ ಮಿತ್ರರಿಗೆ ನನ್ನ ಅಭಿನಂದನೆಗಳು.

**ಶ್ರೀಪರ್ಣಿಕಾ ಕಂಚಿ (ನ್ಯೂ ಜೆರ್ಸಿ)**

ಮುಂದಿನ ಪುಟಕ್ಕೆ ....


Copyright © KCO – Brindavana

## ಒದುಗರ ಓಲೆಗಳು....

**ಹುಟ್ಟಿತಿಂದು ನಮ್ಮ ನಡುವೆ "ಬೃಂದಾವನ" ವಾಣಿ**
**ಸ್ಫೂರ್ತಿ ಮೈತ್ರಿ ಸಂಭ್ರಮಗಳ ಮಿಲನದ ದೋಣಿ**
**ಪದಗಳು ಉದುರಲಿ ಮುತ್ತಿನ್ಹಾಂಗೆ ವೀಣಾ ಪಾಣಿ**
**ನಿಮ್ಮೆಲ್ಲರೀ ಕೈಂಕರ್ಯಕ್ಕೆ ನಾವೆಲ್ಲರೂ ಚಿರಋಣಿ**

ಬೃಂದಾವನ ವಾಣಿಯ ಚೊಚ್ಚಲ ಸಂಚಿಕೆಗೆ ಕಾಯುತ್ತಿದ್ದವರಿಗೆಲ್ಲಾ, ನಮ್ಮ "ವಾಣಿ" ಸಾಹಿತ್ಯದ ಸವಿಯೂಟವನ್ನೇ  ಬಡಿಸಿತು ಎಂದರೆ ಅತಿಶಯೋಕ್ತಿಯಾಗಲಾರದು. ಕನ್ನಡದ ಹಿರಿಯ ಸಾಹಿತಿಗಳಿಂದ ಹಾಗು ರಂಗಕರ್ಮಿಗಳಿಂದ ಶುಭಾಶಯದ ನುಡಿಗಳು, ಬೃಂದಾವನದ ಸದಸ್ಯರಿಂದ ಉತ್ತಮವಾದ ಲೇಖನಗಳು, ಸಂಪಾದಕ ಮಂಡಳಿಯಿಂದ ಅವುಗಳ ಅಚ್ಚುಕಟ್ಟಾದ ಜೋಡಣೆ ಹಾಗು ಉತ್ತಮ ಮಟ್ಟದ "ಪ್ರೂಫ್ ರೀಡಿಂಗ್" ಸಲುವಾಗಿ, ಎಲ್ಲಾ ಲೇಖನಗಳು ಓದಲು ತುಂಬಾ ಹಿತವಾಗಿತ್ತು, ಮನಸ್ಸಿಗೆ ಮುದ ನೀಡಿತು !!!

ಶಿವಾಜಿ ತೇರದಾಳ್ ಬರೆದ "ಬೃಂದಾವನ ಸಂಘ ಅಮರವಾಗಲಿ" ಎಂಬ ಉತ್ತಮ ಕವನ, "ವಾಣಿಯ" ಮುಕುಟಕ್ಕೆ ಕಳಶವನ್ನು ಇಟ್ಟಂತಿದ್ದರೆ, ಬೃಂದಾವನ ಕೂಟದಲ್ಲಿ ನಡೆದ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯ, ಪ್ರತ್ಯಕ್ಷವಾಗಿ ಅಲ್ಲಿಯೇ ಕುಳಿತು ನೋಡಿದ ಅನುಭವ ನೀಡಿತು. ಅನಿಲ್ ಭಾರದ್ವಾಜರ "ಉಪ್ಪಿಯ ಜೊತೆ ಒಂದು ಸಂಜೆ", ಚಿಕ್ಕದಾಗಿ ಚೊಕ್ಕವಾಗಿ ಮೂಡಿದ್ದು, ಕಾವ್ಯ ಕಡಮೆ ಅವರ ಪರಿಚಯ ತುಂಬಾ ಇಷ್ಟವಾಯ್ತು. ಇಷ್ಟು ಚಿಕ್ಕ ವಯಸ್ಸಿನಲ್ಲೆ ಅಷ್ಟೊಂದು ಸಾಹಿತ್ಯಾಭಿಮಾನವನ್ನು ಬೆಳಸಿಕೊಳ್ಳುವುದರ ಜೊತೆಗೆ ಎಲ್ಲ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾರೆ "ಕಾವ್ಯ".ಇನ್ನು ಆಂಗ್ಲ ಮೂಲದ ಕವಿತೆಯ ಕನ್ನಡ ಭಾವನುವಾದವನ್ನು ರಾಘವೇಂದ್ರ ಕುಂದಲಗುರ್ಕಿ ಹಾಗು ಲಲಿತ ವೀರಭದ್ರಯ್ಯ ಅವರು ಚೆನ್ನಾಗಿ ಅನುವಾದಿಸಿದ್ದಾರೆ. ನಾನು ಈ ಕವಿತೆಗಳನ್ನು ಪ್ರತಿ ಸಲ ಓದುವಾಗಲೂ ಕಣ್ಣನ್ನು ತೇವ ಮಾಡಿಕೊಳ್ಳದೆ ಓದುವುದು ಸಾಧ್ಯವೇ ಇಲ್ಲ...ಕೇಶವ ಪ್ರಶಾಂತರ ಬರೆಯುವ ಶೈಲಿ ತುಂಬ ಉತ್ತಮ ಗುಣಮಟ್ಟದ್ದಾಗಿದ್ದು , ಅವರ ಕಥೆ "ಭಯದ ನೆರಳು" ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಎಲ್ಲಾ ಸರಿಯಾಗಿದೆ ಅನ್ನುವಷ್ಟರಲ್ಲಿ ಕೊನೆಯ ಪದ "ಅವಕಾಶ" ದಲ್ಲಿ "ಶ" ನಾಪತ್ತೆ !! ಸುಂದರ ಮುಖಕ್ಕೆ ಪುಟ್ಟದೊಂದು ದೃಷ್ಟಿ ಬಟ್ಟು ಇದ್ದರಲ್ಲವೆ ಆ ಮುಖದ ಅಂದ ಹೆಚ್ಚುವುದು !!!

ಇನ್ನು ಆಹೀಶ್ ಭಾರದ್ವಾಜರ "ಸೃಷ್ಟಿಕರ್ತನ  ಹುಡುಕುತ್ತ"  ಲೇಖನವು ಉತ್ತಮವಾಗಿದ್ದು, ತುಂಬಾ ಆಳವಾಗಿದ್ದರೂ ಸರಳವಾಗಿದ್ದು,  "ಬಿಗ್ ಬ್ಯಾಂಗ್ ಥಿಯರಿ" ಯ ಉಲ್ಲೇಖ ನಮ್ಮ ಋಗ್ವೇದದಲ್ಲಿ ಇರುವುದನ್ನು ತಿಳಿಸಿದಾಗ ಅಚ್ಚರಿ ಹಾಗು ಸಂತಸ ಒಟ್ಟಾಗಿ ಆಯ್ತು. ಸರಿತಾ ನವಲಿ ಯವರ "ಅಮಟೆಕಾಯಿ ಗಿಡದ" ಪ್ರಸಂಗದಿಂದ ಬರಿ ಪುಸ್ತಕ ಜ್ಞಾನ ಒಂದೇ ಸಾಲದು, ಅನುಭವ ಹಾಗು ಜಾಣ್ಮೆ ಅದಕ್ಕಿಂತ ಮಿಗಿಲು ಎಂಬುದನ್ನು ಚಿಕ್ಕದಾಗಿ ಚೊಕ್ಕದಾಗಿ, ನಾಲ್ಕು ಕಗ್ಗದ ಸಾಲುಗಳನ್ನೂ ಸೇರಿಸಿ ಚೆನ್ನಾಗಿ ಬರೆದಿದ್ದಾರೆ.ಉಷಾ ಪ್ರಸನ್ನ ಕುಮಾರ್ ಅವರ "ರೀ..ಬೊಂಬೆ ಇಟ್ಟಿದ್ದೀರ" ಲೇಖನ ನನ್ನನ್ನು ಬಾಲ್ಯದ ದಿವಸಕ್ಕೆ ಕರೆದುಕೊಂಡು ಹೋದ ಉತ್ತಮವಾದ ಲೇಖನ.

ಚಿಣ್ಣರ ಲೋಕದಲ್ಲಿ ಪುಟಾಣಿಗಳು ಬಿಡಿಸಿರುವ ಚಿತ್ರ ತುಂಬ ಮುದ್ದಾಗಿದ್ದು, ನಿಮ್ಮ ಪ್ರಶ್ನೆಗಳು ಚಿಣ್ಣರ ಬುದ್ದಿಗೆ ಕಸರತ್ತು ಕೊಡುವುದಾದರೂ, ದೊಡ್ಡವರ ಸಹಾಯವಿಲ್ಲದೆ ಉತ್ತರಿಸಲು ಸ್ವಲ್ಪ ಕಷ್ಟ ಆಗಬಹುದೇನೊ. !! ಲಕ್ಷ್ಮೀ ರಾವ್ ಅವರ "ಉಗುರಿನ ಸೌಂದರ್ಯ" ಚೆನ್ನಾಗಿದ್ದು, ಶ್ರೀಪರ್ಣಿಕ ಕಂಚಿ ಯವರ "ನನ್ನ ಬಾಲ್ಯದ ಕನಸೊಂದು ನನಸಾಗಿತ್ತು" ಲೇಖನ ಅದ್ಭುತವಾಗಿ ಮೂಡಿಬಂದಿದೆ. ಇನ್ನು ವಾಣಿಯ ಉದ್ದಗಲಕ್ಕೂ ಬಲ ಭಾಗದಲ್ಲಿ ಪ್ರಕಟವಾಗಿರುವ  ಹನಿಗವನಗಳು "ಈ" ಪತ್ರಿಕೆಗೆ ಕಳೆ ತಂದಿದೆ. ಅನಿಲ ಭಾರದ್ವಜರ ಆಶ್ವಯುಜ ಮಾಸದ ವರ್ಣನೆಯ ಕವಿತೆಯ ಸಾಲುಗಳು ಅದ್ಭುತ.. ಭೇಷ್ ಅನಿಲ್ !!! ಅಲ್ಲದೇ ,ರಾಘವೇಂದ್ರ ಕುಂದಲಗುರ್ಕಿ ಅವರ "ಬೃಂದಾವನ ವಾಣಿ" ಯ ಸಾಲುಗಳು, ವಾಹ್ ವಾಹ್ !! ಶಹಭಾಸ್ ರಾಘು !!! ...ಇನ್ನು "ಸುದ್ದಿ ವಾಣಿ"ಯ ಕಟ್ಟೆ ಬಾಯ್ಸ್ ವಿಚಾರ ಹಾಗು ಏಕ್ತಾ ಕೃಷ್ಣಮೂರ್ತಿಯವರ ಸಂಗೀತ ರಂಗ ಪ್ರವೇಶ ತಿಳಿದು ಸಂತಸವಾಯ್ತು. ಕೊನೆಯ ಪುಟದ "ಮುನ್ನೋಟ" ಕೂಡ ಚೆನ್ನಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ, "ಬೃಂದಾವನ ವಾಣಿಯ" ಚೊಚ್ಚಲ ಸಂಚಿಕೆಯಲ್ಲಿ, ಸಂಪಾದಕ ಮಂಡಳಿಯವರು ಎಲ್ಲ ರೀತಿಯ ಲೇಖನಗಳನ್ನೂ ಪ್ರಕಟಿಸಿರುವುದು ಶ್ಲಾಘನೀಯ. ಮುಂಬರುವ ಸಂಚಿಕೆಯಲ್ಲಿ "ಆಧ್ಯಾತ್ಮ ವಾಣಿ" ಹಾಗು "ಯುವ ವಾಣಿ" ಯೂ ಮೊಳಗಲಿ. ಹಾಗೆಯೇ, ಲೇಖನ ಬರೆದವರ ಹೆಸರಿನ ಜೊತೆ ಅವರ ಪುಟ್ಟದಾದ ಒಂದು ಭಾವಚಿತ್ರವನ್ನು ಲಗತ್ತಿಸಿದರೆ "ಹೆಸರಿಗೆ ಒಂದು ಮುಖವನ್ನು ಜೋಡಿಸಿಕೊಳ್ಳಬಹುದು". ಸಂಪಾದಕ ಮಂಡಳಿಯವರೇ, ನೀವೆಲ್ಲಾ ಅತ್ಯುತ್ತಮವಾದ ಕೆಲಸ ಮಾಡಿದ್ದೀರ, ಶಹಭಾಸ್. ತುಂಬು ಹೃದಯದ ಅಭಿನಂದನೆಗಳು. ಹೀಗೆಯೇ ಮುಂದುವರೆಸಿಕೊಂಡು ಹೋಗಲು ನಿಮಗೆಲ್ಲ ಇದೇ ರೀತಿಯ ಉತ್ಸಾಹ, ಪ್ರೋತ್ಸಾಹ, ಶಕ್ತಿ ಹಾಗು ಸಮಯ ಸದಾ ದೊರಕುತ್ತಿರಲಿ ಎಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ. ಧನ್ಯವಾದಗಳು.

**ವಿ.ಪ್ರಸನ್ನಕುಮಾರ್ (ಸಂಸ್ಥಾಪಕ ಅಧ್ಯಕ್ಷರು , ಬೃಂದಾವನ ಕನ್ನಡ ಕೂಟ - ನ್ಯೂ ಜೆರ್ಸಿ)**

ಬೃಂದಾವನ ವಾಣಿ ಅಚ್ಚುಕಟ್ಟಾಗಿ ಮೂಡಿಬಂದಿದೆ. ಪತ್ರಿಕೆಯ ವಿಷಯ, ವಿನ್ಯಾಸ ಮತ್ತು ಪ್ರಸ್ತುತಿ ಎಲ್ಲವೂ ಹದವಾಗಿ ಮಿಳಿತಗೊಂಡು ಒಳ್ಳೆಯ ಓದಿಗೆ ಸಹಕಾರಿಯಾಗಿದೆ. ಇದರ ಯಶಸ್ಸಿಗೆ ಕಾರಣರಾದ ಮಿಲನ ತಂಡ ಮತ್ತು ಸಂಪಾದಕೀಯ ಮಂಡಳಿಗೆ ಹಾರ್ದಿಕ ಅಭಿನಂದನೆಗಳು. ನಿಮ್ಮೆಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

**ಪ್ರಶಾಂತ ಜೋಶಿ (ಮಿನೆಸೋಟಾ)**

'ಬೃಂದಾವನ ವಾಣಿ ' ಯ ಮೊದಲ ಸಂಚಿಕೆಯನ್ನು ಮೆಚ್ಚಿದ  ಮತ್ತು ಮಿಂಚಂಚೆ ಕಳುಹಿಸಿದ ಎಲ್ಲರಿಗೂ ಧನ್ಯವಾದಗಳು. ನಿಮ್ಮ ಅನಿಸಿಕೆ ಮತ್ತು ಸಲಹೆಗಳು ಮುಂಬರುವ ವಾಣಿಯ ಸಂಚಿಕೆಗಳನ್ನು ಇನ್ನೂ ಅಚ್ಚುಕಟ್ಟಾಗಿ ಪ್ರಕಟಿಸುವಲ್ಲಿ ಸಹಾಯವಾಗುತ್ತವೆ.

**-ಬೃಂದಾವನ ವಾಣಿ ಸಂಪಾದಕ ಮಂಡಳಿ**


Copyright © KCO – Brindavana

ಸಂಚಿಕೆ
೦೨
ಜನವರಿ ೨೦೧೬



ಹಿನ್ನೋಟ

# ಕನ್ನಡ ಕೂಟದಲ್ಲಿ ನಡೆದ ಕಾರ್ಯಕ್ರಮಗಳ ಪಕ್ಷಿ ನೋಟ

## ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳೋತ್ಸವ ೨೦೧೫



**ಈ** ವರ್ಷದ ಕನ್ನಡ ರಾಜ್ಯೋತ್ಸವ/ ಮಕ್ಕಳೋತ್ಸವ ಡಿಸೆಂಬರ್ ೬ ರಂದು ಬಾಲಾಜಿ ಮಂದಿರ, ಬ್ರಿಡ್ಜ್ ವಾಟರ್ ನಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸುಮಾರು ೩೦೦ ಕ್ಕೂ ಹೆಚ್ಚು ಜನರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಕ್ಕಳೋತ್ಸವದ ವಿಶೇಷ ಕಾರ್ಯಕ್ರಮವಾದ್ದರಿಂದ ಮಕ್ಕಳಿಗಾಗಿ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕನ್ನಡ ಭಾವಗೀತೆ,ಭಕ್ತಿ ಗೀತೆ ಸ್ಪರ್ಧೆ,ವರ್ಣಚಿತ್ರ ಸ್ಪರ್ಧೆ ಅಲ್ಲದೇ ಮೊದಲ ಬಾರಿ , ಕನ್ನಡ ವರ್ಣಮಾಲೆಯ ಸ್ಪರ್ಧೆಯನ್ನೂ ನಡೆಸಲಾಯಿತು. ಸುಮಾರು ೮೦ ಕ್ಕೂ ಹೆಚ್ಚು ಮಕ್ಕಳು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮಕ್ಕೆ ಹೊಸ ಮೆರಗನ್ನು ನೀಡಿತ್ತು.



ಕನ್ನಡ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡ 'ಕವಿ ಗೋಷ್ಠಿ' ತುಂಬಾ ಚೆನ್ನಾಗಿ ಮೂಡಿ ಬಂದಿತು. ಯುವ ಕವಯಿತ್ರಿ ಕಾವ್ಯಾ ಕಡಿಮೆ ನಾಗರಕಟ್ಟೆ ಅವರು ನಡೆಸಿಕೊಟ್ಟ ಈ ಕಾರ್ಯಕ್ರಮದಲ್ಲಿ , ಸ್ಥಳೀಯ 'ಹವ್ಯಾಸಿ' ಕವಿಗಳು ತಮ್ಮ ಕವನಗಳನ್ನು ಓದಿದರು. ಇದು ಬೃಂದಾವನ ಕನ್ನಡ ಕೂಟದಲ್ಲಿ ನಡೆದ ಮೊದಲ ಕವಿ ಗೋಷ್ಠಿ.

ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ವಿವಿಧ ಕಾರ್ಯಕ್ರಮಗಳು ಬಹಳ ಅದ್ಭುತವಾಗಿ ಮೂಡಿ ಬಂದವು . 'ಕನ್ನಡ ಕಲಿ' ಶಾಲೆಯ ಮಕ್ಕಳಿಂದ ಸಂಕೇತ ಗೀತೆ ಹಾಗೂ ರಾಷ್ಟ್ರಗೀತೆ, ಪುಟ್ಟ ಪುಟ್ಟ ಮಕ್ಕಳಿಂದ ಕಾರ್ಯಕ್ರಮದ ನಿರೂಪಣೆ ಸೊಗಸಾಗಿದ್ದವು. ಅಂದಿನ ನಿರೂಪಣಾ ವಿಷಯವಾಗಿ 'ಕರ್ನಾಟಕದ ನದಿ'ಗಳನ್ನು ಆಯ್ಕೆ ಮಾಡಲಾಗಿತ್ತು. ಅಲ್ಲದೇ, ವಿವಿಧ ವೇಷ ಭೂಷಣಗಳಲ್ಲಿ ಮಕ್ಕಳೆಲ್ಲ ಮುದ್ದಾಗಿ ಕಂಡರು.





ಗಾನ ಬೃಂದಾವನ ತಂಡದವರಿಂದ ಸಾಮೂಹಿಕ ಗೀತೆಗಳು, 'ಒಗ್ಗಟ್ಟಿನ ಬಲ' ಮಕ್ಕಳ ನಾಟಕ, ಕಾವೇರಿ ತೀರದಲ್ಲಿ ಸಾಮೂಹಿಕ ನೃತ್ಯ, ಮಕ್ಕಳ ವಾದ್ಯ ಗಾಯನ, ಹೀಗೆ ಹಲವಾರು ಕಾರ್ಯಕ್ರಮಗಳು ಪ್ರೇಕ್ಷಕರ ಮನ ಸೆಳೆದವು.

ಕೊನೆಯದಾಗಿ 'ನೂಪುರ ಧ್ವನಿ' ಪ್ರಸ್ತುತ ಪಡಿಸಿದ 'ಕರ್ನಾಟಕ ವೈಭವ' - ವಂತೂ ನಯನಗಳಿಗೆ ಹಬ್ಬವನ್ನು ನೀಡಿತ್ತು. ಹಚ್ಚೇವು ಕನ್ನಡದ ದೀಪ, ಪುಷ್ಪಾಂಜಲಿ, ಕೋಲಾಟ, ಕಂಸಾಳೆ, ಕೀಲು ಕುದುರೆ, ಮೈಸೂರು ದಸರಾ ಮೆರವಣಿಗೆ ಬಣ್ಣಿಸಲಸಾಧ್ಯ. ಈ ಕಾರ್ಯಕ್ರಮದಲ್ಲಿ, ಯುವ ಬೃಂದಾವನದ ೮ ಮಕ್ಕಳಿಗೆ ಭಾಗವಹಿಸುವ ಅವಕಾಶ ಒದಗಿ ಬಂದಿದ್ದು ಹೆಮ್ಮೆಯ ವಿಚಾರ. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಪ್ರೇಕ್ಷಕರ ಮನಸೂರೆಗೊಂಡ, ಮಕ್ಕಳೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಬಹಳ ಯಶಸ್ವಿಯಾಗಿ ನೆರವೇರಿತು. -- **ಸುಜಯ ರಾವ್**

## 'ಸಕವಿ' - ಸರಳ ಕನ್ನಡ ಕಲಿಕಾ ವಿಧಾನ




**ಕ**ನ್ನಡ ಶಾಲೆ 'ಬೃಂದಾವನ' ದ ಬಹು ದೊಡ್ಡ ಕನಸು. ಡಾ.ಅಶೋಕ್ ಕಟ್ಟಿಮನಿ ಇದಕ್ಕೆ ಒಂದು ರೂಪ ಕೊಟ್ಟು, ಮುಂದಾಳತ್ವ ವಹಿಸಿದಾಗ , 'ಸಕವಿ' -ಸರಳ ಕನ್ನಡ ಕಲಿಕಾ ವಿಧಾನ ಅಳವಡಿಸುವ ಇವರ ಪ್ರಯತ್ನಕ್ಕೆ ಸರಿ ಸಮಾನವಾಗಿ ಹೆಗಲು ಕೊಟ್ಟವರು ಅನೇಕ ಸ್ವಯಂ ಸೇವಕರುಗಳು ! ಇವರೆಲ್ಲರ ಪರಿಶ್ರಮದಿಂದ ಕನ್ನಡ ಕಂದಮ್ಮಗಳು ಸರಳವಾಗಿ ಕನ್ನಡ ಕಲಿಯುವ ಶಾಲೆಯೊಂದು ಆರಂಭಗೊಂಡಿತು.ಇದು ನ್ಯೂ ಜೆರ್ಸಿಯ ಅನಿವಾಸಿ ಕನ್ನಡಿಗರಿಗೆ ಒಂದು ಸುವರ್ಣ ಅವಕಾಶವಾಗಿದೆ .೪೦ಕ್ಕೂ ಹೆಚ್ಚು ಮಕ್ಕಳು ನೋಂದಾಯಿಸಿದರು. ಕನ್ನಡ ಕಲಿಯುವ ಉತ್ಸಾಹ ತೋರಿದರು. ಅನೇಕ ಸ್ವಯಂ- ಸೇವಕರು ಈ ಪ್ರಯತ್ನದಲ್ಲಿ ತಮ್ಮನ್ನು ಅಳವಡಿಸಿಕೊಂಡಿದ್ದಾರೆ.



ಈ ಪ್ರೋತ್ಸಾಹ ,ಉತ್ಸುಕತೆ , ಕನ್ನಡಾಭಿಮಾನ, 'ಬೃಂದಾವನ ಕನ್ನಡ' ಕೂಟಕ್ಕೆ ಇನ್ನೂ ಹೆಚ್ಚಿನ ಪ್ರೇರಣೆ ನೀಡಿ, ಎರಡನೆ ಕನ್ನಡ ಶಾಲೆಯನ್ನು ಪ್ರಾರಂಭಿಸಲಾಗುತ್ತಿದೆ.ಹೆಚ್ಚಿನ ವಿವರಗಳನ್ನು 'ಮುನ್ನೋಟ' ಅಂಕಣದಲ್ಲಿ ನೀಡಲಾಗಿದೆ.

# ಸಹಾಯ ಹಸ್ತ

## ಚಾರಿಟಿ ಕಾರ್ಯಕ್ರಮ

ಬೃಂದಾವನ ಕನ್ನಡ ರಾಜ್ಯೋತ್ಸವ/ಮಕ್ಕಳೋತ್ಸವ ಡಿಸೆಂಬರ್ ೬ ರಂದು ಬಾಲಾಜಿ ಮಂದಿರ, ಬ್ರಿಡ್ಜ್ ವಾಟರ್ ನಲ್ಲಿ, ನಮ್ಮ ಚಾರಿಟಿ ಟೀಂ, ರೂಪ ಭಟ್ ಅವರ ನೇತೃತ್ವದಲ್ಲಿ, "Coat Drive"ಎಂಬ ಚಾರಿಟಿ ಕಾರ್ಯಕ್ರಮದಲ್ಲಿ ನಯವಾಗಿ ಬಳಸಲಾದ ಉಣ್ಣೆಯ ಜ್ಯಾಕೆಟ್ ಗಳನ್ನು ಸಂಗ್ರಹಿಸಿತು. ನ್ಯೂ ಜೆರ್ಸಿ ಮತ್ತು ನ್ಯೂ ಯಾರ್ಕ್ ಪ್ರದೇಶಗಳಲ್ಲಿನ ನಿರಾಶ್ರಿತರ ಕೇಂದ್ರಗಳಲ್ಲಿ ಇವುಗಳನ್ನು ವಿತರಿಸಲಾಗುವುದು.

# ನಾವು ನೋಡಿದ ಸಿನೆಮಾ








Copyright © KCO – Brindavana

ಸಂಚಿಕೆ
೦೨
ಜನವರಿ ೨೦೧೬

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





# ಯುವ ವಾಣಿ -ಕನ್ನಡ ಬಳಗದ ಯುವ ಪೀಳಿಗೆಗಾಗಿ

“ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ ೧೨ , ಭಾರತದ 'ರಾಷ್ಟ್ರೀಯ ಯುವ ದಿನ' . ನ್ಯೂ ಜೆರ್ಸಿಯ ಯುವ ಬಳಗಕ್ಕೆ 'ರಾಷ್ಟ್ರೀಯ ಯುವ ದಿನ' ದ ಶುಭಾಶಯಗಳನ್ನು ಕೋರಿ , ***'ಯುವ ವಾಣಿ'*** ಅಂಕಣವನ್ನು ಪ್ರಾರಂಭಿಸುತ್ತಿದ್ದೇವೆ. ಕನ್ನಡ ಬಳಗದ ಯುವ ಪೀಳಿಗೆಯ ಚಟುವಟಿಕೆಗಳನ್ನು ಈ ಅಂಕಣದಲ್ಲಿ ಕಾಣಬಹುದು” - ಬೃಂದಾವನ ವಾಣಿ ಸಂಪಾದಕ ಮಂಡಳಿ

**“ಏಳಿ, ಎದ್ದೇಳಿ!!**

**ಗುರಿ ಮುಟ್ಟುವವರೆಗೆ ನಿಲ್ಲದಿರಿ.”**

**- ಸ್ವಾಮಿ ವಿವೇಕಾನಂದ**



(ರಂಗೋಲಿ ಕಲೆ : ಸರಿತಾ ನವಲಿ)

## ಯುವ ಬೃಂದಾವನ ಕಾನ್ಫರೆನ್ಸ್ - ಒಂದು ಪ್ರತ್ಯಕ್ಷ ವರದಿ - ಮಲ್ಲಿಕ್ ಪ್ರಸಾದ್



**ನ**ಮ್ಮ ಯುವ ಬೃಂದಾವನ ತಂಡ ಒಂದು ಉತ್ಸಾಹದ ಚಿಲುಮೆ !

ಈ ಉತ್ಸಾಹಿ ಬೃಂದಾವನದ ಯುವಕರು, ಈ ವರ್ಷ ಬಹಳಷ್ಟು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.ಎಪ್ರಿಲ್ ನಲ್ಲಿ ನಡೆದ ಬೃಂದಾವನ ವಸಂತೋತ್ಸವ, 'ನಾವಿಕ - ವಿಶ್ವ ಕನ್ನಡ ಸಮ್ಮೇಳನ, ಬೃಂದಾವನ ಗಣೇಶೋತ್ಸವಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ವರ್ಷದ ಕೊನೆಗೆ ಪೂರ್ಣ ದಿನದ "ಎರಡನೆ - ಯುವ ಬೃಂದಾವನ ಕಾನ್ಫರೆನ್ಸ್" ಎಂಬ ಕಾರ್ಯಕ್ರಮವನ್ನು ನವೆಂಬರ್ - 28 ರಂದು ಹಮ್ಮಿ ಕೊಂಡರು. ಶಿಕ್ಷಣ, ಸೇವೆ ಮತ್ತು ಸಾಮಾಜಿಕ ಎಂಬ ಮೂರು ಅಂಶಗಳ ಸುತ್ತ ಹೆಣೆದ ಪೂರ್ಣ ದಿನದ ಕಾರ್ಯಕ್ರಮದಲ್ಲಿ 30 ಕನ್ನಡದ ಯುವಕರು ಭಾಗವಿಹಿಸಿದರು.




"ಶೈಕ್ಷಣಿಕ"ದ ಅಂಗವಾಗಿ, ವೈದ್ಯಕೀಯ ಪ್ರಪಂಚದ ಆಳ ಅಗಲದ ಅರಿವಿರುವ ಶಾಕುಂತಲ ಚಂದ್ರ, ಸ್ನೇಹ ಕುಮಾರ್, ನಂದಿನಿ ಪ್ರಸಾದ್, ಲಕ್ಷ್ಮಿ ಪ್ರಸಾದ್, ವೈದ್ಯ ವೃತ್ತಿ ಯನ್ನು ಪರಿಚಯಿಸಿ ಒಂದು ಗಹನವಾದ ಚರ್ಚೆ ನಡೆಸಿದರು. ಮಕ್ಕಳ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟರು. ಎಲ್ಲರಿಗೂ ಬಹಳಷ್ಟು ಅರಿವು ಮೂಡಿದ/ಮೂಡಿಸಿದ ಸಂತೋಷ ಸಿಕ್ಕಿತು.


"ಸಾಮಾಜಿಕ"ದ ಅಂಗವಾಗಿ, ಐ-ಪ್ಲೇ ಅಮೇರಿಕಾದ ವಿಸ್ತಾರವಾದ ಅಂಗಣದಲ್ಲಿ ಲೇಸರ್ ಟ್ಯಾಗ್, ಗೋ ಕಾರ್ಟ್, ಬಂಪರ್ ಕಾರ್ ಮತ್ತು ಅನೇಕ ಆಟಗಳನ್ನು ಒಟ್ಟಿಗೆ ಆಡಿ, ಮೋಜು ಮಾಡಿದ ಎಲ್ಲ ಸಮವಯಸ್ಕರ ಗೆಳೆತನ ಬೆಳೆಯಿತು. ಒಟ್ಟಿನಲ್ಲಿ ಸಮಯ ಓಡಿದ್ದೇ ಗೊತ್ತಾಗಲಿಲ್ಲ.

"ಸೇವೆ"ಯ ಅಂಗವಾಗಿ ಎಲ್ಲರೂ ಸೇರಿ ತರಕಾರಿ ಸ್ಯಾಂಡ್ವಿಚ್ ಮಾಡಿ, ಬ್ರೌನಿ (ಸಿಹಿ ತಿಂಡಿ) ತಯಾರಿಸಿ, ಹಣ್ಣುಗಳ ಜೊತೆ ಮುನ್ನೂರು Breakfast Brown Bag ತಯಾರಿ ಮಾಡಿದರು. ಮಾರನೆ ದಿನ ನ್ಯೂ ಬ್ರುನ್ಸ್ವಿಕ್ಕ್ ಹತ್ತಿರ ಇರುವ Ozanam Men's and Family Shelter ಹತ್ತಿರ ಬಡ ಜನರಿಗೆ ಬೆಳಗಿನ ತಿಂಡಿಯನ್ನು ನಗುವಿನ ಜೊತೆ ಹಂಚಿ ಸಾಮಾಜಿಕ ಕಳಕಳಿಯ ತೋರಿದರು.

ಈ ಎಲ್ಲ ಚಟುವಟಿಕೆಗಳನ್ನು ಯುವ ಬೃಂದಾವನದ ಸುಹಾಸ್ ಕುಮಾರ್,ಅಮೂಲ್ಯ ಕಟ್ಟೀಮನಿ ಮತ್ತು ತಂಡ ಯಶಸ್ವಿಯಾಗಿ ನಡೆಸಿ , "ಶೈಕ್ಷಣಿಕ", "ಸಾಮಾಜಿಕ" ಮತ್ತು "ಸೇವೆ" ಎಂಬ ಮೂರು ಅಂಶಗಳ ಈ ಯುವ ಬೃಂದಾವನ ಕಾನ್ಫರೆನ್ಸ್ ಕಾರ್ಯಕ್ರಮದಲ್ಲಿ ದಿನವಿಡೀ ತೊಡಿಸಿಕೊಂಡು ಯುವ ಜನತೆಗೆ ಮಾದರಿ ಎನಿಸಿದರು.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




# ಡಾ. ಗುರುಪ್ರಸಾದ ಕಾಗಿನೆಲೆ

ಸಂದರ್ಶನ : ಕಾವ್ಯಾ ಕಡಮೆ ನಾಗರಕಟ್ಟೆ




**ಪರಿಚಯ:**

**ಕನ್ನಡದ ಸೂಕ್ಷ್ಮ ಕಥೆಗಾರ ಗುರುಪ್ರಸಾದ ಕಾಗಿನೆಲೆಯವರು ಹುಟ್ಟಿದ್ದು ಶಿವಮೊಗ್ಗದಲ್ಲಿ. ಬೆಳೆದದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್ ಮತ್ತು ಎಂಡಿ ವ್ಯಾಸಂಗ ಮಾಡಿದ ಇವರು ಸದ್ಯ ಅಮೇರಿಕಾದ ಮಿನೆಸೋಟಾ ರಾಜ್ಯದ ರಾಚೆಸ್ಟರ್ ನಲ್ಲಿ ಎಮರ್ಜೆನ್ಸಿ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸವಾಗಿರುವ ಇವರು ನಿರ್ಗುಣ, ಶಕುಂತಳಾ, ದೇವರ ರಜಾ ಸಂಕಲನಗಳ ಮೂಲಕ ಕಥೆಗಾರರಾಗಿ; ಬಿಳಿಯ ಚಾದರ, ಗುಣ ಸಂಕಲನಗಳ ಮೂಲಕ ಕಾದಂಬರಿಕಾರರಾಗಿ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಶೈಲಿಯ ಅಚ್ಚೊತ್ತಿದ್ದಾರೆ. ಹಲವು ಪ್ರಶಸ್ತಿಗಳು ಇವರ ಸಾಹಿತ್ಯವನ್ನು ಅರಿಸಿಕೊಂಡು ಬಂದಿರುವುದರ ಜೊತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಯೋಜನೆಯಡಿಯಲ್ಲಿ ಇವರ ಕಥೆಗಳು ಮರಾಠಿ, ಕೊಂಕಣಿ ಮತ್ತು ತೆಲಗು ಭಾಷೆಗಳಿಗೆ ಅನುವಾದವಾಗಿವೆ.**

**೧. ತಮ್ಮ ಬರವಣಿಗೆಯ ಸ್ಪೂರ್ತಿಗೆ ಬಾಲ್ಯದ ಪರಿಸರ ಹೇಗೆ ಪೂರಕವಾಗಿತ್ತು?**

ನಾನು ಬೆಳೆದಿದ್ದು ತೀರಾ ಮಡಿವಂತ ಅಲ್ಲದಿದ್ರೂ ಸಂಪ್ರದಾಯಬದ್ಧವಾದ ಕುಟುಂಬದಲ್ಲಿಯೇ. ಆಗಿನ ಕಾಲದಲ್ಲೇ ನಮ್ಮ ತಾಯಿ ತುಂಬಾ ಓದ್ತಾ ಇದ್ರು. ಅವರು ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿದ್ದರು. ನಾನೂ ಹೈಸ್ಕೂಲಿನಲ್ಲಿದ್ದಾಗ ಕೈಗೆ ಸಿಕ್ಕಿದ್ದನ್ನೆಲ್ಲ ಓದುತ್ತಿದ್ದುದು ನೆನಪಿದೆ. ಜನಪ್ರಿಯ ಕಾದಂಬರಿಗಳು, ಸುಧಾ- ತರಂಗ ಮುಂತಾದ ವಾರಪತ್ರಿಕೆಗಳು, ಪತ್ತೇದಾರಿ ಕಾದಂಬರಿಗಳನ್ನು ಓದುವುದು ಆಗಿನ ನನ್ನ ನೆಚ್ಚಿನ ಹವ್ಯಾಸವಾಗಿತ್ತು. ತ್ರಿವೇಣಿ, ಭಾರತಿಸುತ, ತರಾಸು, ಭೈರಪ್ಪ, ಅನಕೃ, ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಲಂಕೇಶರ ಪುಸ್ತಕಗಳನ್ನು ಹೈಸ್ಕೂಲು- ಕಾಲೇಜುಗಳಲ್ಲಿ ಓದುತ್ತಿದ್ದೆ. ಆಗೆಲ್ಲ ಭೈರಪ್ಪನವರ 'ತಬ್ಬಲಿಯು ನೀನಾದೆ ಮಗನೇ', 'ಗೃಹಭಂಗ' ಮತ್ತು ಲಂಕೇಶರ 'ಟೀಕೆ-ಟಿಪ್ಪಣಿ' ಗಳನ್ನು ಓದಿ ಪ್ರಭಾವಿತನಾಗಿದ್ದು ನೆನಪಿದೆ. ಆದರೆ ಚಿಕ್ಕವನಿದ್ದಾಗ ಮುಂದೊಂದು ದಿನ ಕನ್ನಡದಲ್ಲಿ ಕಥೆ ಬರೆಯುತ್ತೇನೆಂಬ ಕಲ್ಪನೆಯೂ ನನಗಿರಲಿಲ್ಲ. ಎಂಬಿಬಿಎಸ್ ಓದುತ್ತಿದ್ದಾಗ ಕಾಲೇಜು ಮ್ಯಾಗಜಿನ್ನಿಗೆ ಕವಿತೆಗಳನ್ನು ಬರೆಯಲು ಶುರು ಮಾಡಿದಾಗಲೇ ಬರವಣಿಗೆಯ ಜಗತ್ತು ನನ್ನನ್ನು ಮೊದಲು ಆಕರ್ಷಿಸಿದ್ದು.





**೨. ಮುಂಬೈ ನೆಲದ ತಲ್ಲಣಗಳನ್ನು ಚಿತ್ತಾಲ, ಜಯಂತ ಕನ್ನಡಕ್ಕೆ ತಂದಷ್ಟೇ ಪರಿಣಾಮಕಾರಿಯಾಗಿ ನೀವು ಅಮೇರಿಕಾದ ಭಾರತೀಯರ ಬದುಕನ್ನು ಕನ್ನಡ ಕಥಾಲೋಕಕ್ಕೆ ತಂದವರು. ಹೀಗೆ ಎರಡು ನೆಲಗಳ ಸಂಸ್ಕೃತಿಯ ಸಂಘರ್ಷವನ್ನು ಬರೆಯುವಾಗ ನೀವು ಎದುರಿಸುವ ಬಹುದೊಡ್ಡ ಸವಾಲು ಏನು?**

ಕಥೆ ಬರೆಯುವಾಗ ಆ ಕಥೆಯಲ್ಲಿ ಬರುವ ಕಥಾಪಾತ್ರಗಳ ಹಿನ್ನಲೆಯಷ್ಟೇ ಮುಖ್ಯ ಅನ್ನೋದು ನನ್ನ ಅನಿಸಿಕೆ. ಪಾತ್ರಗಳನ್ನು ಅವರಷ್ಟಕ್ಕೇ ಅವರನ್ನು ಬಿಟ್ಟು ಕಥೆಗಾರ ದೂರನಿಂತು ನೋಡಬೇಕಾಗುತ್ತದೆ. ಪ್ರತಿ ಕಥೆಗಾರನೊಳಗೂ ಅವನದೇ ಆದ ಒಂದು 'ಕಥಾಲೋಕ'ವಿರುತ್ತದೆ. ಅವನು ಆ ಲೋಕದೊಳಗೇನೇ ಓಡಾಡಬೇಕು. ಅದಕ್ಕೆ ಹೊರತಾಗಿ ಕಥೆಗೆ ಬೇಕಾಗುವ ಪರಿಸರವನ್ನು ಆ ಪಾತ್ರಗಳೇ ನಿರ್ಧರಿಸುತ್ತವೆ. ಅದೇ ಕಾರಣಕ್ಕಾಗಿ ಬಾಲ್ಯದ ಅನುಭವಗಳನ್ನ ಕಥೆ ಮಾಡುವಾಗ ನಾನು ತುಂಬಾ ಎಚ್ಚರ ವಹಿಸುತ್ತೇನೆ, ಅದು ಕೇವಲ ಹಳಹಳಿಕೆ (ನಾಸ್ಟಾಲ್ಜಿಯಾ) ಆಗಿಬಿಡಬಾರದಲ್ಲ ಎಂಬ ಕಾರಣಕ್ಕಾಗಿ. ಇಪ್ಪತ್ತು ವರ್ಷ ಈ ನೆಲದಲ್ಲಿ ಇದ್ದ ಮೇಲೆ, ನಾನು ರಾಮಾಯಣ ಬರೆದರೂ ಅದರಲ್ಲಿ ಅಮೇರಿಕಾ ಬರಬಹುದೇನೋ ಎಂಬ ಗುಮಾನಿ ನನಗೆ!




**೩. ಕೆಲವು ವರ್ಷಗಳ ಹಿಂದೆ ವಿದೇಶದಲ್ಲಿ ನೆಲೆಸಿರುವ ಕಥೆಗಾರರ ಕತೆಗಳನ್ನು ಒಳಗೊಂಡ 'ಆಚೀಚೆಯ ಕತೆಗಳು' ಸಂಕಲನವನ್ನು ಸಂಪಾದಿಸಿದ ನೀವು, ಆ ಕೃತಿಯ ಪ್ರಸ್ತಾವನೆಯಲ್ಲಿ ವಿದೇಶದ ಲೇಖಕರನ್ನು ಕನ್ನಡದ ಮುಖ್ಯವಾಹಿನಿಯ ಬರಹಗಾರರ ಜೊತೆಗೆ ಪರಿಗಣಿಸುವುದಿಲ್ಲವೇನೋ ಎಂಬ ಆತಂಕ ವ್ಯಕ್ತಪಡಿಸಿದ್ದಿರಿ. ಆ ಕುರಿತು ಈಗ ಏನು ಹೇಳುತ್ತೀರಿ?**

ಯಾವುದೇ ಬರವಣಿಗೆಯನ್ನು ಬ್ರಾಂಡ್ ಮಾಡುವುದು, ಅದರ ಗುಣಮಟ್ಟವನ್ನು ಒಂದು ಗುಂಪಿಗೆ ಸೀಮಿತಪಡಿಸುವುದು ತಪ್ಪು ಅಂತ ನನ್ನ ಅಭಿಪ್ರಾಯ. ಕನ್ನಡದ ಕತೆಗಳನ್ನು ಲೇಖಕ ಯಾವ ದೇಶದಲ್ಲಿದ್ದು ಬರೆದರೂ ಅವು ಕನ್ನಡದ್ದೇ ಕತೆಗಳು ಎಂಬ ಮುಕ್ತ ಮನಸ್ಸು ಎಲ್ಲರಲ್ಲಿಯೂ ಇರಬೇಕು. ತುಂಬಾ ಮೊದಲು ವೃತ್ತಿ ಅರಿಸಿಕೊಂಡು ಅಮೇರಿಕಾಗೆ ವಲಸೆ ಬಂದ ಕನ್ನಡ ಬರಹಗಾರರಲ್ಲಿ ಆ ಆತಂಕ ಸಕಾರಣವಾಗಿಯೇ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಆ ಸೀಮೆ ಕ್ರಮೇಣ ಮಾಸಿಹೋಗುತ್ತಿರುವುದು ನನಗೆ ತುಂಬಾ ಸಂತಸವನ್ನು ತಂದಿದೆ. ಅಂದರೆ ಸಾಮಾಜಿಕ ಜಾಲತಾಣಗಳ ಈ ಇಲೆಕ್ಟ್ರಾನಿಕ್ ಯುಗದಲ್ಲಿ ಪ್ರಪಂಚ ತುಂಬಾನೇ ಸಣ್ಣದಾಗಿದೆ. ಇನ್ನುಳಿದಂತೆ ಯಾವುದೇ ಸಾಹಿತ್ಯದ ಗುಣಮಟ್ಟವನ್ನು ಕಾಲವೇ ನಿರ್ಧರಿಸುತ್ತದೆ ಎಂಬುದು ನನ್ನ ನಂಬಿಕೆ.




**೪. ತಾವು ಕಥೆ ಕಾದಂಬರಿಗಳ ಜೊತೆಗೆ ವೈದ್ಯಕೀಯ ಅನುಭವಗಳ ಕಥನವನ್ನು ಬರೆದವರು. ಮೂಲದಲ್ಲಿ ಸೃಜನಶೀಲ ಸಾಹಿತ್ಯ ರಚನೆಗೂ ಅನುಭವ ಕಥನ ಬರೆಯುವುದಕ್ಕೂ ಇರುವ ವ್ಯತ್ಯಾಸವೇನು? ಈ ವೈರುಧ್ಯಗಳನ್ನು ನೀವು ಹೇಗೆ ಭರಿಸುತ್ತೀರಿ?**

ಕಥೆ ಕಾದಂಬರಿಗಳು ಕೇವಲ ಅನುಭವಗಳ ದಾಖಲೆ ಅಲ್ಲ. ಕೇವಲ ಅನುಭವಗಳಾಗಿ ಉಳಿಯದೇ ಆಳವಾಗಿ ಕಾಡುವ ಅತಿಸೂಕ್ಷ್ಮ ಮನುಷ್ಯ ಸಂಬಂಧಗಳು ಕಥೆಗೆ ಹೂರಣವಾಗುತ್ತವೆ. ಯಾವುದೇ ಅನುಭವವೂ ಸಾವಯವವಾಗಿ ಕತೆಯ ರೂಪದಲ್ಲಿ ಮೂಡಿಬರಲು ಆ ಒಂದು ಮಿಂಚು ಬೇಕೇ ಬೇಕು. ಅದೇ ಪ್ರಬಂಧಗಳಲ್ಲಿ ಘಟನೆಗಳನ್ನು ಘಟನೆಗಳನ್ನಾಗಿಯೇ ಇಡಬಹುದು. ಹತ್ತಿರದಿಂದ ನೋಡಿದ್ದು, ಮನಸ್ಸಿಗೆ ತಟ್ಟಿದ್ದು ಎಲ್ಲ ಪ್ರಬಂಧವಾಗಬಹುದು. ಆದರೆ ಅವೇ ಘಟನೆಗಳು ಕತೆಯಾಗಿ ಹೆಣೆದುಕೊಳ್ಳಲು ಒಂದು ಮ್ಯಾಜಿಕ್ ಬೇಕು ಅಂತ ನನ್ನ ಅನುಭವದಿಂದ ಹೇಳಬಲ್ಲೆ.





**೫. ಅತಿ ಸೂಕ್ಷ್ಮ ಮಾನವ ಸಂಬಂಧಗಳುಳ್ಳ ಗದ್ಯ ಬರವಣಿಗೆಯನ್ನು ಬರೆದಿರುವ ನೀವು ಪದ್ಯ ಬರವಣಿಗೆಯ ಕಡೆಗೆ ಏಕೆ ಗಮನ ಹರಿಸಿಲ್ಲ? ಅದಕ್ಕೇನಾದರೂ ವಿಶೇಷ ಕಾರಣವಿದೆಯೇ?**

ಕವಿತೆ ನನಗೆ ತೀರಾ ವೈಯಕ್ತಿಕ ಮಾಧ್ಯಮ. ಅತೀ ಖುಷಿಯಾದಾಗ ಅಥವಾ ದುಃಖವಾದಾಗ ತೀರಾ ಪರ್ಸನಲ್ ಅನ್ನಿಸುವ ಸ್ವಗತದ ಕವಿತೆಗಳನ್ನ ಬರೀತೀನಿ. ಆ ಕಾರಣಕ್ಕಾಗಿಯೇ ಅವುಗಳನ್ನು ಇನ್ನೂ ಪ್ರಕಟಿಸುವ ಯೋಚನೆ ಮಾಡಿಲ್ಲ, ಮುಂದೆ ಪ್ರಕಟಿಸಬಾರದು ಅಂತಾನೂ ಇಲ್ಲ.

**೬. ನೀವು ಇತ್ತೀಚೆಗೆ ಏನನ್ನು ಬರೆಯುತ್ತಿದ್ದೀರಿ?**

ಇತ್ತೀಚೆಗೆ ನಾನೊಂದು ಹೊಸ ನೀಳ್ಗತೆ ಬರೆದೆ. ಬೇರೆ ಭಾಷೆಯ ಎಷ್ಟೋ ಕವಿತೆಗಳನ್ನ ಅರ್ಥ ಮಾಡಿಕೊಳ್ಳೋದಕ್ಕೆ ಅವುಗಳನ್ನ ಕೆಲವೊಮ್ಮೆ ಅನುವಾದ ಮಾಡ್ತೀನಿ. ಸದ್ಯಕ್ಕೆ ಸುಖೇತು ಮೆಹೆತಾರ 'ಮ್ಯಾಕ್ಸಿಮಮ್ ಸಿಟಿ' ಕೃತಿಯನ್ನ ಅನುವಾದ ಮಾಡ್ತಾ ಇದೀನಿ. ಯಾವುದೇ ಕೃತಿ ನನ್ನನ್ನು ತೀವ್ರವಾಗಿ ಕಾಡಿದಾಗ ಅದನ್ನು ಕನ್ನಡಕ್ಕೆ ಭಾಷಾಂತರಿಸುವ ಮೂಲಕ ಹೆಚ್ಚು ಅರ್ಥ ಮಾಡಿಕೊಳ್ಳೋಕೆ ಸಾಧ್ಯ ಅಂತ ನನಗನ್ನಿಸುತ್ತದೆ.





Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ

## ಕವಿ ನಮನ -ಭಾಸ್ಕರ್ ತೈಲಗೇರಿ




**ಕುವೆಂಪು -ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ** (ಡಿಸೆಂಬರ್ ೨೯, ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ )

ಕರ್ನಾಟಕದಲ್ಲಿ ಯಾರನ್ನಾದರೂ ಕನ್ನಡದ ಒಬ್ಬ ಕವಿಯನ್ನು ಹೆಸರಿಸಿ ಅಂದರೆ, ಅವರಿಂದ ಬರುವ ಮೊದಲ ಉತ್ತರವೇ ಕುವೆಂಪು. ಕುವೆಂಪು ಕನ್ನಡ ನಾಡಿನ ಅತ್ಯಂತ ಶ್ರೇಷ್ಟ ಕವಿ. ಅವರನ್ನು ಕವಿ ಅನ್ನುವ ಬದಲು ಸಾಹಿತ್ಯ ಸಾಮ್ರಾಟ್ ಎಂದು ಕರೆಯಬಹುದೇನೋ. ಏಕೆಂದರೆ ಅವರು ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ತೊಡಗಿಸಿಕೊಂಡವರು. ಕವನ, ಮಹಾಕಾವ್ಯ, ಕಾದಂಬರಿ, ನಾಟಕ, ಕತೆ, ಪ್ರಬಂಧ, ಶಿಶು- ಸಾಹಿತ್ಯ, ವಿಮರ್ಶೆ ಮತ್ತು ಆಧ್ಯಾತ್ಮಿಕ ಬರಹಗಳಲ್ಲಿ ಹಿರಿಮೆಯನ್ನು ಸಾಧಿಸಿದವರು. ಅವರ ಕೃತಿಗಳಲ್ಲಿ ಪ್ರಕೃತಿ ಮತ್ತು ನಿಸರ್ಗದ ಬಗ್ಗೆ ಹೆಚ್ಚು ವಿವರಣೆ ಕಾಣಬಹುದು. ಅವರನ್ನು ಜನ ನಿಸರ್ಗ ಕವಿ / ಪ್ರಕೃತಿ ಕವಿ ಅಂತಲೂ ಕರೆಯುತ್ತಾರೆ.

ಕುವೆಂಪುರವರಿಗೆ ಹಲವಾರು ಪ್ರಶಸ್ತಿಗಳು ನೀಡಿ ಗೌರವಿಸಲಾಗಿದೆ. ಅವುಗಳಲ್ಲಿ ಕೆಲವು ಹೀಗಿವೆ.ಕರ್ನಾಟಕರತ್ನ(೧೯೯೨), ಪದ್ಮವಿಭೂಷಣ (೧೯೮೮),ಪಂಪಪ್ರಶಸ್ತಿ(೧೯೮೭),ಜ್ಞಾನಪೀಠ(೧೯೬೭),ರಾಷ್ಟ್ರಕವಿ(೧೯೬೪,)ಪದ್ಮಭೂಷಣ (೧೯೫೮),ಸಾಹಿತ್ಯಅಕ್ಯಾಡೆಮಿಪ್ರಶಸ್ತಿ(೧೯೫೫).

ಕನ್ನಡಕ್ಕೆ ಮೊದಲ 'ಜ್ಞಾನಪೀಠ' ಪ್ರಶಸ್ತಿಯನ್ನು ತಂದು ಕೊಟ್ಟವರು ಕುವೆಂಪು. ಅವರಿಗೆ ಸಾಹಿತ್ಯ ನೊಬೆಲ್ ಪ್ರಶಸ್ತಿ ಸಿಗಬೇಕಿತ್ತು ಅಂತ ನನ್ನ ಅನಿಸಿಕೆ. ಅವರ ಕನ್ನಡ ಪ್ರೀತಿಗೆ ಅವರಿಗೆ ಅವರೇ ಸಾಟಿ. "ಬಾರಿಸು ಕನ್ನಡ ಡಿಂಡಿಮವ ,"ಎಲ್ಲಾದರೂ ಇರು, ಎಂತಾದರು ಇರು " ಎನ್ನುವ ಕವನಗಳಿಗಿಂತ ಬೇರೆ ಉದಾಹರಣೆ ಬೇಕೆ? "ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು" ಕವನವಂತೂ ಅನಿವಾಸಿ ಕನ್ನಡಿಗರಿಗೆ ಹೇಳಿ ಮಾಡಿಸಿದಂಥ ಗೀತೆ.

## ಅಜ್ಜಯ್ಯನ ಅಭ್ಯಂಜನ




'ಅಜ್ಜಯ್ಯನ ಅಭ್ಯಂಜನ', ಕುವೆಂಪುರವರ '**ಮಲೆನಾಡಿನ ಚಿತ್ರಗಳು**' ಪುಸ್ತಕದ ಒಂದು ಪ್ರಬಂಧ. ಇದು ನನ್ನ ಮನಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಅದರ ಬಗ್ಗೆ ನಿಮ್ಮ ಬಳಿ ಹಂಚಿಕೊಳ್ಳೋಣ ಅಂತ ಅನ್ನಿಸಿತು. ಹಾಗಾಗಿ ಈ ಬರಹ.

ಅಜ್ಜಯ್ಯ ಕುವೆಂಪುರವರ ತಾತ. ಅಭ್ಯಂಜನ-ಎಣ್ಣೆ ಸ್ನಾನ. ನಮ್ಮ ಮನೆಗಳಲ್ಲೂ ಪ್ರಮುಖ ಹಬ್ಬಗಳಲ್ಲಿ ಎಣ್ಣೆ ಸ್ನಾನ ಮಾಡುವ ವಾಡಿಕೆಯುಂಟಲ್ಲವೇ?

ಕುವೆಂಪುರವರ ಮನೆಯಲ್ಲಿ ಪ್ರತಿ ಭಾನುವಾರ ಈ ಅಭ್ಯಂಜನ ಮುಖ್ಯ ಆಚರಣೆಯಾಗಿತ್ತು. ಇದು ಬೆಳಿಗ್ಗೆ ಆರು ಗಂಟೆಗೆ ಶುರುವಾದರೆ ರಾತ್ರಿ ಎಂಟು ಗಂಟೆಯವರೆಗೆ ನಡೆಯುತ್ತಿತ್ತೆಂದು ಕವಿ ಬರೆಯುತ್ತಾರೆ. ಮನೆಯಲ್ಲಿ ಎಲ್ಲರಿಗೂ ಅಭ್ಯಂಜನವಾಗಬೇಕು. ಅವರ ಮನೆಯ ಮಕ್ಕಳೆಲ್ಲಾ ಇದನ್ನು ಎಷ್ಟು ದ್ವೇಷಿಸುತ್ತಿದ್ದರೋ, ಏಕೆಂದರೆ ಭಾನುವಾರ ರಜಾದಿನ. ಆ ದಿನ ಅವರು ಹೊರಗೆ ಹೋಗಿ ಆಡುವಂತಿರಲಿಲ್ಲ. ಕಾಡು-ಮೇಡು ಸುತ್ತುವಂತಿರಲಿಲ್ಲ.

ಕುವೆಂಪು ಮತ್ತು ಇತರ ಮಕ್ಕಳಿಗೆ ಪಾಠ ಹೇಳಿಕೊಡುವ ಗುರುಗಳು (ಐಗಳು ಅಂತ ಕರೆಯುತ್ತಾರೆ) ಪಾಠಗಳಲ್ಲದೆ, ಇತರೆ ಕೆಲಸಗಳಲ್ಲೂ ಸಹಾಯ ಮಾಡುತಿದ್ದರು. ಮಕ್ಕಳಿಗೆ ಅಭ್ಯಂಜನ ಮಾಡಿಸುವುದು ಅವರ ಒಂದು ಕೆಲಸ. ವಯಸ್ಸಿನ ಆಧಾರವಾಗಿ ಚಿಕ್ಕಮಕ್ಕಳಿಂದ, ದೊಡ್ಡಮಕ್ಕಳವರೆಗೆ ಅಭ್ಯಂಜನ ನಡೆಯುತ್ತಿತ್ತು. ನಂತರ ಹಿರಿಯರು. ಕೊನೆಯಲ್ಲಿ ಅಜ್ಜಯ್ಯನ ಸರದಿ !!

ಅವರ ಮನೆಯಲ್ಲಿ ತುಂಬಾ ದೊಡ್ಡದಾದ ಬಚ್ಚಲುಮನೆ. ಅಲ್ಲೊಂದು ದೊಡ್ಡ ಒಲೆ. ಅದರ ಮೇಲೆ ನೀರು ಕಾಯಿಸುವ ಎರಡು ದೊಡ್ಡ ಹಂಡೆಗಳು. ಇಬ್ಬರು ಆಳುಗಳು ಕುದಿಯುವ ನೀರನ್ನು ಕಡಾಯಿಗಳಿಗೆ ಹಾಕಿ ತಣ್ಣೀರನ್ನು ಬೆರಸುತ್ತಿದ್ದರು. ಐಗಳು ಮಕ್ಕಳ ಮೈಗೆ ಚೆನ್ನಾಗಿ ಎಣ್ಣೆ ತಿಕ್ಕುತ್ತಿದ್ದರು. ಎಣ್ಣೆ ನೆಂದ ಮೇಲೆ ತುಂಬಾ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಿದ್ದರು. ಎಷ್ಟು ಮಕ್ಕಳಿದ್ದರು ಅಂತ ಉಲ್ಲೇಖವಿಲ್ಲ. ಸುಮಾರು ಮಕ್ಕಳಿದ್ದರು ಅನಿಸುತ್ತದೆ. ಪಾಪ ಐಗಳ ಪಾಡು ಯಾರಿಗೂ ಬೇಡ. ಹುಡುಗ ಕಣ್ಣಿಗೆ ಎಣ್ಣೆ ಹೋಯಿತು ಅಂತ ಕಿರಿಚುತ್ತಿದ್ದರೆ, ಇನ್ನೊಬ್ಬ ನೀರು ಬಿಸಿ ಅಂತ, ಮಗದೊಬ್ಬ ಸೀಗೆಕಾಯಿಪುಡಿ ಬಿತ್ತು ಅಂತ ಐಗಳನ್ನು ಗೋಳು ಹೊಯ್ದುಕೊಳ್ಳುತಿದ್ದರು. ಕಣ್ಣುಗಳನ್ನು ಎಷ್ಟು ಬಿಗಿಯಾಗಿ ಮುಚ್ಚಿದರೂ ಸೀಗೆಪುಡಿ ಹೇಗೊ ಕಣ್ಣೊಳಗೆ ನುಸಿಳಿಬಿಡುತ್ತಿತ್ತು. ನಮಗೆಲ್ಲರಿಗೂ ಇದರ ಅನುಭವವಾಗಿದೆಯಲ್ಲವೇ?

ಸ್ನಾನ ಮಾಡುವಾಗ ಕೆಲವು ಮಕ್ಕಳು ನೀರಿನ ಬಿಸಿ ತಾಳಲಾರದೆ ಮೂರ್ಛೆ ತಪ್ಪುತ್ತಿದ್ದರಂತೆ. ಐಗಳು ಹೇಗೆ ಇದ್ದನೆಲ್ಲಾ ಸಂಭಾಳಿಸುತ್ತಿದ್ದರೋ?

ಇನ್ನು ಅಜ್ಜಯ್ಯ ಬಹಳ ವಯಸ್ಸಾದವರು. ಅವರಿಗೆ ದೇವರಲ್ಲಿ ಅಪಾರವಾದ ನಂಬಿಕೆ. ಕಳ್ಳ (ಮದ್ಯ) ನ್ನು ಹಿತವಾಗಿ ಮಿತವಾಗಿ ತೀರ್ಥದಂತೆ ಸೇವಿಸುತ್ತಿದ್ದರೆಂದು ಕವಿ ಬರೆಯುತ್ತಾರೆ. ಮಕ್ಕಳು ಮತ್ತು ಇತರರ ಅಭ್ಯಂಜನದ ನಂತರ ಅಜ್ಜಯ್ಯನ ಅಭ್ಯಂಜನ! ಅದು ಸುಮಾರು ಆರು ಗಂಟೆಗಳ ಕಾರ್ಯಕ್ರಮ. ಅಜ್ಜಯ್ಯ ವಿವಿಧ ದೇವರಗಳನ್ನು ನೆನುಯುತ್ತ ಎಣ್ಣೆಯನ್ನು ಕುಂಕುಮದ ಬೊಟ್ಟುಗಳ ತರಹ ದೇಹದ ಭಾಗಗಳಿಗೆ ಇಟ್ಟಿಕೊಳ್ಳುತ್ತಿದ್ದರಂತೆ. ಆಳುಗಳು ಎಣ್ಣೆಯನ್ನು ಮೈಯೆಲ್ಲಾ ಚೆನ್ನಾಗಿ ತಿಕ್ಕುತ್ತಿದ್ದರು. ಯಾವ ಎಣ್ಣೆ ಎಂಬ ಉಲ್ಲೇಖವಿಲ್ಲ. ಹರಳೆಣ್ಣೆ ಇದ್ದಿರಬಹುದು ಎಂದು ನನ್ನ ಊಹೆ.

ಅವರ ಬಚ್ಚಲು ಮನೆಯಲ್ಲಿ ಹನ್ನೆರಡು ಅಡಿ ಉದ್ದದ ಬೋಗುಣಿ (ಟಬ್) ಇತ್ತಂತೆ. ಅಜ್ಜಯ್ಯ ಬಿಸಿನೀರಿನಲ್ಲಿ ಸ್ನಾನ ಮಾಡುತಿರಲಿಲ್ಲವಂತೆ. ಅವರಿಗೆ ಸುಡುನೀರೆ ಬೇಕಿತ್ತು. ಸ್ನಾನದ ನಂತರ ನಿಂಬೆ ಪಾನಕ ಸೇವನೆ. ಕಷ್ಟ ಪಟ್ಟು ಸ್ನಾನ ಮಾಡಿಸುತ್ತಿದ್ದ ಆಳುಗಳಿಗೆ ಪಾನಕವಿರುತ್ತಿರಲಿಲ್ಲ.ಅಜ್ಜಯ್ಯ ಕಲ್ಲಿನ ಬೆಂಚಿನ ಮೇಲೆ ಕುಕ್ಕರುಗಾಲಿನಲ್ಲಿ ಕೂತು, ಆಳುಗಳಿಂದ ಸುಡುನೀರನ್ನು ಎರಚಿಸಿಕೊಳ್ಳುತ್ತಿದ್ದರು.ಇನ್ನು ಸೀಗೆಪುಡಿ ಹಾಕಿ ಮೈಯಲ್ಲಾ ತಿಕ್ಕಿ ಎಣ್ಣೆಯನ್ನು ಹೋಗಿಸಿ , ತಲೆಗೂ ಸೀಗೆಪುಡಿಯನ್ನು ಹಾಕಿ ಒಂದೇ ಒಂದು ಕೂದಲಲ್ಲೂ ಎಣ್ಣೆ ಇಲ್ಲದಂತೆ ಮಾಡುವ ಕೆಲಸ ಆಳುಗಳದ್ದಾಗಿತ್ತು. ಅವರು ಸ್ವಲ್ಪ ಮೇಲಿನಿಂದ ಜಲಪಾತದಂತೆ ಬಿಸಿನೀರನ್ನು ಅಜ್ಜಯ್ಯನ ತಲೆಯ ಮೇಲೆ ಸುರಿಯುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಅಜ್ಜಯ್ಯ ಆಗಾಗ ಮೂರ್ಛೆ ಹೋಗುವುದು, ಎಚ್ಚರಗೊಳ್ಳುವದು ಆಗುತ್ತಿತ್ತು .ಕೆಲವು ಸಲ ಮೂರ್ಛೆ ಹೋದಾಗ ತುಂಬಾ ಹೊತ್ತು ಜ್ಞಾನ ಬರುತ್ತಿರಲಿಲ್ಲವೆಂದು ಬರೆದಿದ್ದಾರೆ. ಆಳುಗಳು ತಣ್ಣೀರು ಎರಚಿ, ದೇವರ ಪ್ರಾರ್ಥನೆ ಮಾಡಿ ಎಚ್ಚರಗೊಳಿಸಲು ಪ್ರಯತ್ನಿಸುತ್ತಿದ್ದರಂತೆ. ತುಂಬಾ ಹೊತ್ತಿನ ನಂತರ ಅಜ್ಜಯ್ಯ ಕಣ್ಣು ಬಿಟ್ಟು "ನಾರಾಯಣ" ಎಂದಾಗ, ಆಳುಗಳಿಗೆ ಸಮಾಧಾನ. ಆಮೇಲೆ ಅಜ್ಜಯ್ಯನಿಗೆ ಮಾತ್ರ ಪಾನಕ ಸೇವನೆ. ಮತ್ತೆ ಸ್ನಾನ. ಮತ್ತೆ ಮೂರ್ಛೆ !! ಸ್ನಾನ ಮುಗಿದ ಮೇಲೆ ಗಂಗಾ ಯಮುನೆಯರನ್ನು ನೆನೆದು, ನಾಲ್ಕು ದಿಕ್ಕುಗಳಿಗೂ ನಮಸ್ಕಾರ ಮಾಡುತ್ತಿದ್ದ ಅಜ್ಜಯ್ಯ ನಂತರ ಕಲ್ಲು ಬೆಂಚಿನ ಮೇಲೆ ಕಂಬಳಿ ಹೊದ್ದು ಮಲಗುತ್ತಿದ್ದರಂತೆ. ಆ ರಾತ್ರಿ ಅಜ್ಜಯ್ಯ ಊಟ ಮಾಡುತ್ತಿರಲಿಲ್ಲ. ಬರಿ ಹಾಲು ಕುಡಿದು ನಿದ್ರಿಸುತ್ತಿದ್ದರು. ಅಜ್ಜಯ್ಯ ಕಾಲವಾದ ಮೇಲೆ, ಅಭ್ಯಂಜನ ಸಂಪ್ರದಾಯವೂ ಕೊನೆಗೊಂಡಿತಂತೆ "!!

**(ಚಿತ್ರ ಕೃಪೆ: ಅಂತರ್ಜಾಲ)**


Copyright © KCO – Brindavana

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ.....

## ಬೃಂದಾವನ ಕವಿಗೋಷ್ಠಿಯಲ್ಲಿ ಓದಿದ ಕವನಗಳು

### ಜೀವನ ಪ್ರೀತಿ - ಕೇಶವ ಪ್ರಶಾಂತ್

ಹುಟ್ಟಿನೊಳು ಯಾರೂ ಪರಿಚಿತರಿರರು,
ಬದುಕಿನ ಯಾತ್ರೆಯ ಸಹಸ್ರ ಪಯಣಿಗರು.
ಇದ್ದಷ್ಟು ದಿನ ನಗೆಯ ಚೆಲ್ಲಿ ಬದುಕೋಣ,
ವ್ಯರ್ಥ ರೋದನೆಗಳ ತುಸು ದೂರಾಗಿಸೋಣ.

ಕ್ಷಣ ಕಳೆದು ದಿನವಾಗಿ ಕಾಲ ಚಕ್ರವು ಸಾಗಿ
ನಗೆ ಮಾಸಿ ಮೊಗ ಬಾಡುವ ಸಮಯ ಬರಬಹುದು,
ಕಠಿಣತೆಯು ಅನಿವಾರ್ಯ, ಜಗದ ನಿಯಮವಿದು,
ಪೂರ್ಣ ಚಂದ್ರನ ಮೇಲೂ ಕರಿ ಮುಗಿಲು
ಕವಿಯುವುದು.

ಕಾರ್ಮೋಡ ಬಲು ಬೇಗ ಕರಗಿ ನೀರಾಗುವುದು,
ಗಗನದಂಗಳ ಅತಿ ಶೀಘ್ರ ತಿಳಿಯಾಗುವುದು.
ಜೀವನ ಪ್ರೀತಿಯಿರಲಿ ಅನು ದಿನವೂ, ಅನುಕ್ಷಣವೂ
ಸಂತಸದ ಸಮಯ ಮರಳಿ ಬಂದೇ ಬರುವುದು.

### ಹತ್ತಿರ ನಲ್ಮೆಯ ನುಡಿ.
**- ರಾಘವೇಂದ್ರ ಕುಂದಲಗುರ್ಕಿ**

ದಶಮಾನ ಕಳೆದರು ಅಳಿಯದೀ ಒಲವು,
ಜೀವನದ ಲತೆಯಲ್ಲಿ ಈ ನಿನ್ನ ಸೆಳವು !

ಬಾಳನಾವಿಗೆಯಲ್ಲಿ ನೀನಾದೆ ಜೊತೆಗಾತಿ,
ಇರುಳು-ಹಗಲಿನ ಒಳಗೆ ನೀ ನನ್ನ ಸಂಗಾತಿ.
ಹಚ್ಚಿರುವೆ ಮನೆಯಂಗಳದಲ್ಲಿ ದೀಪದಾ ಸಾಲು,
ಹಬ್ಬಿದೆ ಮೈ-ಮನಗಳಲ್ಲಿ ವಾತ್ಸಲ್ಯದ ಬೆಳಕು.

ವಿಧಿಕಾರನ ನಿಯಮದಿ ಬೆರೆತಿದೆ ಸಂಬಂಧ,
ಸಂಸಾರದ ಅರ್ಣದಲಿ ಇರದಿಹಿದೊ ನಿರ್ಬಂಧ.
ಕಷ್ಟ-ಸುಖಗಳು ಜೀವನದಿ ಬೇವು-ಬೆಲ್ಲದಂತಿರಲು,
ಅರಿತಿರುವ ಮನವಿರಲು
ಹಾಲುಜೇನಿನಂತಾಗುವುದು.

ಲತೆಬಳ್ಳಿ ಚಂದಕ್ಕೆ ಮೊಗ್ಗೊಂದು ಅರಳಿರಲು,
ಬೆಸೆದಿರುವ ಜೀವನದಿ ತಂಗಾಳಿ ಯಾಗಿರಲು.
ಓಡುತಿರುವ ಕಾಲಚಕ್ರದಿ ಬಂಧಿಗಳು ನಾವೆಲ್ಲ,
ಶತಮಾನ ಕಳೆದರೂ ಚಿಂತೆಗಳು ನಮಗಿಲ್ಲ..

### ಇಳೆಯ ದನಿ-ಮಳೆಯ ಹನಿ - ಅಹೀಶ್ ಭಾರದ್ವಾಜ

ಬಿಸಿಲ ಧಗೆಗೆ ಧರೆ ಬಿರುಕಾಗಿ
ಒಡಲಿನ ಕೂಗು ಬರಿ ಕ್ಷೀಣವಾಗಿ;
ಹಾತೊರೆದಿದೆ ಧರೆ ಮುಂಗಾರು ಮಳೆಯ
ಕರೆಯುತಿದೆ, ಓ ಮೇಘದೂತ ಬಾ ನನ್ನೀ ಗೆಳೆಯ ||

ಹಂಬಲಿಸುತಿಹೆ ಆಗಸದಂಚಲಿ ಮೇಘಮಾಲೆಯ
ಗುಡುಗು ಸಿಡಿಲಿದೆ ನಿನ್ನಲಿ ತೋರು ಜಲಧಾರೆಯ;
ನೀನೊಲಿದರೆ ಕುಸುಮವೀ ವನದಲಿ
ನೀಮುನಿದರೆ ಬೆಂಗಾಡು ನನ್ನಲಿ ||

ನಿನ್ನೀ ಮನದಾಳವ ಅರಿಯಾಲಾರೆ
ನಿನ್ನೀ ಹನಿಯ ದನಿಯ ಮಿಡಿಯಲಾರೆ;
ಒಮ್ಮೊಮ್ಮೆ ನಾನೆಷ್ಟು ಕರೆದರೂ ಬರಲೊಲ್ಲೆ?
ಮಗದೊಮ್ಮೆ ನಾ ಬೇಡವೆಂದರೂ ಬಿಡಲೊಲ್ಲೆ! ||

ನಿನ್ನಿಚ್ಛೆಯಾಟದಿ ಬಳಲುವುವು ನನ್ನೀ ಮನುಕುಲ
ದಿನದಿನದಿ ಆಗುವುವು ಜೀವ ಜಟಿಲ;
ಇಳೆಗೆ ಮಳೆಯ ಗೆಳೆತನ, ನಿತ್ಯ ಚೇತನ
ಇದಕೆ ರುವಾರಿ ನನ್ನೀ ಮನುಜರ ನಮ್ಮಿಬ್ಬರ ಚಿಂತನ ||

### ನೆರಳು - ಸರಿತಾ ನವಲಿ

ಇಲ್ಲೊಂದು ಪುಟ್ಟ ಕಂದ :
ಅಮ್ಮ ಹೇಳಿದ ಗುಮ್ಮನಿರಬಹುದೇ ?
ಅತ್ತರೂ ಬಿಡಲೊಲ್ಲದು, ಬೆನ್ನಟ್ಟಿ ಬರುತಿದೆ ;
ಭೀತಿಗೊಂಡಿದೆ ಕಂದ ತನ್ನ ನೆರಳ ನೋಡಿ |
ಗುಮ್ಮನಲ್ಲವೋ ನಾನು ನಿನ್ನ ಬಿಂಬ ರೂಪ ,
ಜೊತೆಯಾಗಿ ನಾ ಬರುವೆ ಓ ಪುಟ್ಟ ಪಾಪ ;
ನಕ್ಕಿತು ನೆರಳು ಕಂದನೊಂದಿಗೆ ಆಟವಾಡಿ |

ಅಲ್ಲೊಬ್ಬ ಯುವ ಪ್ರೇಮಿ :
ಪ್ರೇಮಿಯ ಮೆಚ್ಚಿಸಿತು ಅವರ ಪ್ರೀತಿಯ ಮೋಡಿ,
ನಿನ್ನ ನೆರಳಾಗಿ ನಾನಿರುವೆ ಎಂಬ ಪ್ರೇಯಸಿಯ ನುಡಿ |
ಮುಂದೊಂದು ದಿನ, ನಡೆದಳು ಪ್ರೇಯಸಿ ದೂರ ಓಡಿ,
ಪ್ರೇಮಿಯ ಹೃದಯವ ಚೂರು, ಚೂರು ಮಾಡಿ|
ಅರಿತನಿವ ನೆರಳಿನ ನಿಜವ ; ಆಗಲಿಲ್ಲ ಹೇಡಿ,
ರಾತ್ರಿಯ ಕತ್ತಲೆಯಲ್ಲಿ ನೆರಳೂ ಜೊತೆಬಿಡುವುದು ನೋಡಿ !

ಅದೊಂದು ವೃದ್ಧಾಶ್ರಮ , ಹೆಸರು ಸಂಧ್ಯಾದೀಪ :
ಸಡಿಲಗೊಂಡು, ಕಳಚಿಹೋಗಿವೆ ಸಂಬಂಧಗಳ ಕೊಂಡಿ,
ಬಾಳ ಸಂಜೆಯಲ್ಲಿರುವ ಜೀವನ ಬಂಡಿ |
ಮಸುಕು ಕಣ್ಣುಗಳ ಜೀವ , ಪ್ರಶ್ನಿಸಿತು ನೆರಳ ನೋಡಿ,
ನಾನೀಗ ಒಂಟಿ, ನೀನಿನ್ನೂ ಜೊತೆಯಿರುವೆಯಾ ಮರಳು ಮಾಡಿ?
ಅರುಹಿತು ನೆರಳು ಜೀವನದ ಕಹಿಸತ್ಯದ ನುಡಿ,
ಕಾಪಾಡು ಸಂಧ್ಯಾ ದೀಪದ ಬೆಳಕ, ನಾನು ನಿನ್ನ ನಿರಂತರ ಜೋಡಿ !!

### ಮಂಡ್ಯ ರೈತನ ಕಾವೇರಿಯೊಂದಿಗೆ ಏಕಾಂಗಿ ಮಾತುಕತೆ - ಅನಿಲ್ ಭಾರದ್ವಾಜ

ಯಾಕ್ ಅಷ್ಟು ಬಿರ್ಬಿರ್ನೆ ಓಡ್ತೀಯೇ ಕಾವೇರವ್ವ
ವಸೀ ನನ್ ವಟ್ಗೆ ಮಾತಾಡಕ್ ನಿಲ್ ನನ್ನವ್ವ

ಮುಂದ್ನ ಉಣ್ಮೆ ನಮ್ಮೂರ್ನಾಗ್ ಜಾತ್ರೆ ಐತೆ
ಇನ್ನೊಂಚ ದಿನ್ಕೆ ದಸರಾ ಅಬ್ಬ ಬರ್ತೈತೆ

ಕಬ್ಬಿನ್ ಜೆಲ್ಲೆಗುಳು ನಿನ್ ನೋಡಿ ಜೋಕಾಲಿ ಆಡ್ತಾಯ್ವೆ
ಬತ್ತದ್ ತೆನೆ ರಾಗಿ ಪೈರು ಉಚ್ಚೆದ್ದು ಕುಣೀತೈವೆ

ಕನ್ನಂಬಾಡಿ ಕಟ್ಟೇಲಿ ಕೂಡಾಕಿದ್ ಕ್ವಾಪನ?
ಸಿವನ್ ಸಮುದ್ರದಲ್ ಜಾರಿಬಿದ್ಕೆ ಬೇಸ್ರನ?

ಐನೊರಂಗೆ ನಂಗೆ ಪೂಜೆ ಮಾಡಾಕ್ ಬರೋಲ್ದು
ಊರಗೌಡ್ನಂಗೆ ಬಾಗ್ನ ಬಟ್ಟೆ ಆಕಕ್ ಕಾಸಿಲ್ದು

ಆವಿನ್ ಮೇಲ್ ಮಲೀಕೊಂಡ ರಂಗಣ್ಣನ್ ತೋರಿಸ್ತೀನಿ
ತಲ್ಕಾಡಿನ್ ಮಳ್ಳ್ ಗೋಪ್ರದ್ ಮೇಲಿಂದ ಜಾರಿಸ್ತೀನಿ

ಘಟ್ಟ ಆಯಿಸಿ ಒಂಟ್ರೆ ಬೇರೆ ಬಾಸೆ ಮಂದಿ ಗೊತ್ತಲ್ವ?
ಸುಮ್ಕೆ ಇಲ್ಲೇ ಇರು ಆಯಾಗಿ ನೀನೇ ನನ್ ಸರ್ವಸ್ವ

### ಕಡಲಾಚೆಯ ಕನ್ನಡಿಗರು !!!



ಚಿತ್ರ :ಸರಿತಾ ನವಲಿ


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ.....

## ಅತಿಥಿ ಬರಹಗಾರರ ಕವನಗಳು



### ಮರುಗದಿರು ಕನ್ನಡ ತಾಯೇ

ಸುನಿಲ್ ಕೇಸರಿ (ವಿದ್ಯಾರ್ಥಿ, ಕೃಷಿ ವಿ.ವಿ. ಬೆಂಗಳೂರು)

**ಕ**ನ್ನಡದ ಅಮೃತ ಉಣಿಸಿ, ನಿನ್ನ ಮಡಿಲಲ್ಲಿ ನನ್ನ ಬೆಳೆಸಿ
ಸಿಡಿಲ ಮರಿಯಂತೆ ನಾನಿರಲು , ನೀ ಮರುಗದಿರು ಕನ್ನಡದ ತಾಯೇ

ಅವರಿವರೆನ್ನದೆ ಬಂದವರಿಗೆಲ್ಲಾ ಕನ್ನಡದ ಪ್ರೀತಿ
ಮಡಿಲಸೆರಗ ನೀ ನೀಡಿದೆ, ಆದರೆ ಆ ಮೂಢರು
ತಾಯೆಂದು ನಿನ್ನ ಅರಿಯದೆ ,ಸೆರಗ ಎಳೆಯುತಿಹರೆಲ್ಲ ತಾಯೇ
ನಿನ್ನ ಉಳಿವ ಬಗ್ಗೆ ಚಿಂತಿಸದೆ, ಪರಕೀಯರ
ನಡೆಗೆ ಸೋತು ಕುಳಿತಿಹರಲ್ಲ , ನಾ ಹೇಗೆ ನೋಡಿ ಸಹಿಸಲಿ
ಆಜ್ಞೆ ನೀಡು ನಿನ್ನ ನಿಂದಿಸಿದವರ ಎದೆಯ ಸೀಳಿ ಕನ್ನಡ ವಿಜಯಪತಾಕೆ
ಹಾರಿಸುವೆ.

ನಾಕಾರು ಜನದೆದುರು ಈ ನಿನ್ನ ಕಂದನನ್ನು ಥಳಿಸಿದರು
ನೀ ಸುಮ್ಮನೆ ಕುಳಿತಿರುವೆ ಯಾಕೆ ? ನಿನ್ನ ಮಡಿಲಲ್ಲಿಯೆ ಹುಟ್ಟಿ
ಕನ್ನಡದ ಹೆಸರನ್ನೇ ಮಣ್ಣಲಿ ಮುಚ್ಚಲು ಹೊರಟಿಹ ಇವರಿಗೆ
ಯಾಕೆ ಬೇಕು ಕ್ಷಮೆ ? ನಿನ್ನ ಕರುಳ ಕುಡಿಗಳಾದ ಬಸವ , ಕನಕ, ಅಕ್ಕಳ
ಮಾತಿಗಿಂದು ಬೆಲೆಯಿಲ್ಲಾ, ನೀ ಕಣ್ಮರೆಯಾಗುವ ಮುನ್ನ
ಆಜ್ಞೆ ಮಾಡು ಕನ್ನಡದ ವೀರಕೇಸರಿಯಾಗಿ ಸಿಡಿದು ನಿಲ್ಲುವೆ.

ಚಿನ್ನದಂತಹ ನಿನ್ನ ಮಡಿಲ ಅಗೆಯುತಿಹರು, ನಿನ್ನೊಡಲ
ಸಸ್ಯಕಾಶಿಯ ಸುಡುತಿಹರು, ನೀ ಸಾಕಿದ ವನ್ಯಸಂಕುಲವ ಕೊಲ್ಲುತಿಹರು
ಜೀವದನಿ ಕಂಪಿಸುವ ಶಿಲಾಗೋಪುರವ ಕೆಡುಹುತಿಹರು
ಸಿಂಧೂರಮಯ ಕನ್ನಡದ ಗೌರವವ ಅಳಿಸುತಿಹರು
ನಿನ್ನ ಕಣ್ಣೀರ ಒರೆಸದೆ , ಆ ಕಣ್ಣೀರಲಿ ನಗೆಯ ಓಕುಳಿ ಆಡುತಿಹರು
ಆಜ್ಞೆಮಾಡಿ , ಕನ್ನಡದ ಈ ಮರಿಸಿಂಹದ ಬೇಟೆಯ ನೀ ನಗುತ
ನೋಡು.

ನೀ ನೊಂದು -ಬೇಯುತಿರಲು ನೋಡಲಾಗದೆ ಜೀವ ಹಿಡಿದಿರುವೆ
ನಿನ್ನ ಕೈಹಿಡಿದು ಎತ್ತಬೇಕಾಗಿರುವ, ಕೈಗಳು ಕೈಲಾಗದೆ ಕುಳಿತ
ಹೇಡಿಯ ದೃಶ್ಯವ ನೋಡಿರುವೆ ,ಅದಕೆ ಅವರೆದೆಯ
ಬಡಿದೆಬ್ಬಿಸಲು ಖಡ್ಗದಂತಹ ಈ ಲೇಖನಿ ಹಿಡಿದಿರುವೆ
ನೀನೊಮ್ಮೆ ಆಶೀರ್ವದಿಸು ತಾಯೇ, ಮಲಗಿರುವ ಹೃದಯಗಳ
ಬಡಿದು " ಸಿರಿಗನ್ನಡಂ ಗೆಲ್ಗೆ" ," ಸಿರಿಗನ್ನಡಂ ಗೆಲ್ಗೆ" ಮಂತ್ರ
ಹಾಡಿಸುವೆ ಕನ್ನಡದ ಅಮೃತ ಉಣಿಸಿ , ನಿನ್ನ ಮಡಿಲಲ್ಲಿ ನನ್ನ ಬೆಳೆಸಿ
ಸಿಡಿಲಮರಿಯಂತೆ ನಾನಿರಲು , ನೀ ಮರುಗದಿರು ಕನ್ನಡದ ತಾಯೇ.



### ಮಳೆ ,ವಸ್ತು , ಪರ್ವತ

ಮಾಧವ ವೆಂಕಟೇಶ್ (ಇಂಜಿನಿಯರ್, ಕಾರ್ನಿಂಗ್ - ನ್ಯೂ ಯಾರ್ಕ್)

**ಮಳೆ**

ಆಶಾವಾದ, ಹರುಷದಿಂದ ತುಂಬಿದೆ ನಿನ್ನ ದನಿ,
ಮರುಕ್ಷಣ ಬೀಳುತ್ತದೆ ನಿನ್ನ ಹಣೆಯ ಮೇಲೆ ಒಂದ್ಹನಿ.
ನಗೆ ತುಂಬಿದ ನೀನು ತಕ್ಷಣ ಮಾಡಿಕೊಳ್ಳುತ್ತೀಯಾ ಪೆಚ್ಚು ಮುಖ,
ಮಳೆರಾಯ ಯಾಕೆ ಬಂದು ಕಸಿದುಕೊಂಡ ಈ ದಿನದ ಸುಖ?

ಇದೇ ಮಳೆಯನ್ನು ನೀನು ಹೊಸ ದೃಷ್ಟಿಯಿಂದ ನೋಡಲು ಸಾಧ್ಯವಾ?
ಎಂಥೆಂಥಾ ವಾತಾವರಣಕ್ಕೆ ಹೊಂದಿಕೊಳ್ಳುತ್ತಾನೆ ಮಾನವ!
ತಂಪು ಗಾಳಿ, ತೊಯ್ದ ಮಣ್ಣಿನ ವಾಸನೆ, ಬೂದು ಮೇಘದ ಆಕಾಶ,
ಮಗುವಿನ ಕಣ್ಣಿಂದ ನೋಡಿದವನಿಗೆ ಇವೆಲ್ಲಾ ಅಚ್ಚರಿ ಮೂಡಿಸುವ ಅವಕಾಶ!

**ವಸ್ತು**

ಆಹಾ, ಎಷ್ಟೊಂದು ಇಷ್ಟ ನಿನಗೆ ಆ ವಸ್ತು,
ಈ ಕ್ಷಣವೇ ಅನ್ನಬೇಕಾಗಿದೆ ದೇವರು ಅದಕ್ಕೆ ಅಸ್ತು!
ಕಡಿಮೆಯಾ ಈ ವಸ್ತು ವ್ಯಾಮೋಹದ ಒತ್ತಡ?
ಆಗಿರಬಹುದು ಅದು ಫೋನು, ಕಾರು, ಅಥವಾ ಕಟ್ಟಡ!

ಈ ಒತ್ತಡವನ್ನು ಜಯಿಸಲು ಇದೆಯಾ ನಿನಗೆ ತಾಕತ್ತು?
ಒಂದೇ ಒಂದು ದಿನ ಮುಂದ್ಹಾಕಿ, ಮರೆತುಬಿಡು ನಿನ್ನ ಹಿರಿದಾಸೆ ಇವತ್ತು!
ನಾಳೆ ಎದ್ದು ಯೋಚಿಸುತ್ತಿ, "ಅರೆರೆ! ಎಲ್ಲಿ ಹೋಯಿತು ಆ ವಸ್ತು ಕೊಳ್ಳುವ ತೀವ್ರತೆ?",
"ಅದು ಇಲ್ಲದೆ ನನಗೆ ಆಗಿದೆಯಾ ಈ ದಿನ ಏನಾದರೂ ಕೊರತೆ?".

**ಪರ್ವತ**

ಆಗತಾನೆ ಪ್ರಾರಂಭವಾಗಿತ್ತು ವಸಂತ ಮಾಸ,
ದಿಟ್ಟಿಸಿ ನೋಡುತ್ತಾ ನಿಂತೆ ,ಹಿಮಾಲಯದ ಭೂಕೈಲಾಸ!
ಸುತ್ತಮುತ್ತಲೂ ಎಲ್ಲೆಲ್ಲೂ ಪರ್ವತ ,ಗಗನದಲ್ಲಿ ಹೊಳೆಯುವ ಆದಿತ್ಯ,
ಏಕೋ ಎನಿಸಿತು ,ಈ ದೃಶ್ಯವನ್ನು ನೋಡುತ್ತಿರಬೇಕು ದಿನನಿತ್ಯ!

ಪರ್ವತದ ದಿಕ್ಕಿನಲ್ಲಿ ನಡೆಯುತ್ತಿದ್ದನು ಒಬ್ಬ ಮಾನವ,
ಋಷಿಯ ಉಡುಪು ಧರಿಸಿ ,ತಲುಪುತ್ತಿದ್ದನು ತನ್ನ ತಾಣವ.
ಹಠಾತ್ತನೆ ನಿಂತು ,ಹಿಂದೆ ನೋಡಿ ,ಸೆಳೆದ ನನ್ನ ಗಮನ ,
ಅವನ ಕಣ್ಣಿನ ಸಂದೇಶ ನನಗೆ ನೀಡಿತು ,ಪರ್ವತದೆಡೆಗೆ ಆಹ್ವಾನ!


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಸಾಹಿತ್ಯ ವಾಣಿ

# ಕನ್ನಡ ಬಳಗದ ಸಾಹಿತ್ಯಾಭಿರುಚಿ.....



## ನಾ ಕಂಡಂತೆ

ಜೀವನಾನುಭವಗಳು. . . .

### ಮತ್ತೊಮ್ಮೆ ಹುಟ್ಟಿ ಬಂದಂತಿದೆ ,ಫಿಲಿಪೀನ್ಸ್ ಸಾಗರದಲ್ಲಿ ಆಗಬಹುದಾಗಿದ್ದ ಒಂದು ದುರಂತ...

..... ವಿ. ಪ್ರಸನ್ನ ಕುಮಾರ್

**ಸು**ಮಾರು ಆರು ವರುಷದ ಹಿಂದೆ....ನಾನು ಕೆಲಸ ಮಾಡುವ ಕಂಪನಿಯ ಕ್ಲಯೆಂಟ್ ಒಬ್ಬರನ್ನು, ನಾನು ಕೆಲಸದ ನಿಮಿತ್ತ ಫಿಲಿಫೀನ್ಸ್ ಗೆ ಕರೆದುಕೊಂಡು ಹೋಗುವ ಸೌಭಾಗ್ಯ ನನಗೆ ಒದಗಿ ಬಂತು. ನನ್ನ ಕೆಲಸವ್ರೋ ಹೇಳಿ ಕೇಳಿ "ಕ್ಲಯೆಂಟ್ ರಿಲೇಶನ್ ಶಿಪ್ ಮ್ಯಾನೇಜ್ ಮೆಂಟು". ಹಾಗಾಗಿ ಅವರ ಕಛೇರಿಯ ಕೆಲಸದ ಜೊತೆಗೆ ಹೊರಗಿನ ಮನರಂಜನೆಯೂ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವ ಭಾರ ನನ್ನದಾಗಿತ್ತು.ವಾರಪೂರ್ತಿ ಕತ್ತೆಯಂತೆ ಕಛೇರಿಯಲ್ಲಿ ಕಾರ್ಯವಹಿಸಿದ ನಂತರ ವಾರಂತ್ಯ ಮನಿಲ ಪಟ್ಟಣದಿಂದ ಸುಮಾರು ೧೦೦ ಮೈಲಿ ದೂರದ ಬೊರಕಾಯ್ ಅನ್ನುವ ಕಡಲತೀರದ ಊರಿಗೆ ಹೋಗುವುದೆಂದು ನಿಶ್ಚಯವಾಯ್ತು. ಸರಿ, ನಮ್ಮ ಕ್ಲಯೆಂಟ್ ಕಂಪನಿಯ ಟಾಮ್ ಹಾಗು ನನ್ನ ಮನಿಲ ಆಫೀಸಿನ ಫ಼ಿಲಿಪಿನೊ ಸಹೋದ್ಯೋಗಿ ಆರ್ಲಾನ್ ಜೊತೆ ಸೇರಿ ಬೊರಕಾಯಿಗೆ ಹೊರಟೆವು...ಟಾಮ್, ಒಬ್ಬ ಸಮರ್ಥ "ಸ್ಕೂಬ ಡೈವರ್" ಹಾಗು ಕಳೆದ ೫-೬ ವರ್ಷಗಳಿಂದ ಹಲವಾರು ಸಮುದ್ರಗಳಲ್ಲಿ ಸ್ಕೂಬ ಡೈವಿಂಗ್ ಮಾಡಿದ್ದ ಧುರೀಣ ! ಅಮೆರಿಕದಲ್ಲಿ ಇದ್ದಾಗಲೆ ಬೊರೊಕಾಯಿನಲ್ಲಿ



ಸಮುದ್ರದ ಒಳಗೆ "ಸ್ಕೂಬ ಡೈವಿಂಗ್" ಮಾಡುವ ಕಾರ್ಯಕ್ರಮ ಹಾಕಿಕೊಂಡು ಬಿಟ್ಟಿದ್ದ.ಇನ್ನು ನಾನು ಹಾಗು ಆರ್ಲಾನ್ ಒಳ್ಳೆಯ ಈಜುಗಾರರಾದರೂ ಕೂಡ ಸ್ಕೂಬ ಡೈವಿಂಗ್ ಬಗ್ಗೆ ಏನೂ ಅರಿಯದ ಹಸುಳೆಗಳು. ಸರಿ,ಕ್ಲಯೆಂಟ್ ಅನ್ನು ಖುಶಿ ಪಡಿಸಲು ಏನಾದರೂ ಮಾಡಲೇಬೇಕಲ್ಲ.ನಾವಿಬ್ಬರು ಒಂದು ೪-೫ ಘಂಟೆಗಳಲ್ಲಿ ಸ್ಕೂಬ ಡೈವಿಂಗ್ "ಕ್ರಾಶ್ ಕೊರ್ಸ್" ಮಾಡಿ ಕಲಿತೆವು...ಅಥವ ಕಲಿತೆವು ಅಂತ ಅಂದುಕೊಂಡುಬಿಟ್ಟೆವು !!!

ಸರಿ ಶುರುವಾಯ್ತು ನಮ್ಮ ತರಬೇತಿ. ಒಂದು ಆಳವಾದ ಈಜುಕೊಳದಲ್ಲಿ. ಕಣ್ಣಿಗೆ ನೀರು ಹೋಗದ ಕನ್ನಡಕವನ್ನು ಹಾಕಿಕೊಂಡು, ದೇಹಕ್ಕೆ ಡೈವಿಂಗ್ ಸೂಟ್ ಧರಿಸಿಕೊಂಡು, ಬೆನ್ನಿಗೆ ಭಾರದ ಆಕ್ಸಿಜನ್ ಸಿಲಿಂಡರ್ ಒಂದನ್ನು ಕಟ್ಟಿಕೊಂಡು (ಬ್ಯಾಕ್ ಪ್ಯಾಕ್ ತರಹ) ಅದರಿಂದ ಬರುವ ರಬ್ಬರಿನ ಕೊಳವೆಯನ್ನು ಬಾಯಿಯಲ್ಲಿ ಸದಾ ಗಟ್ಟಿಯಾಗಿ ಇಟ್ಟುಕೊಂಡು ನೀರಿನೊಳಗೆ ಉಸಿರಾಡಬೇಕು. ಅದನ್ನು ಕಲಿಸಿ ಕೊಡುವವರು ತರಬೇತಿ ಸಮಯದಲ್ಲಿ ನೀರಿನೊಳಗೆ ನಮ್ಮ ಪಕ್ಕದಲ್ಲಿಯೇ ಇರುವುದರರಿಂದ ನೀರಿನೊಳಗೆ ಕೆಳಕ್ಕೆ, ಮೇಲಕ್ಕೆ ಹೋಗಬೆಕಾದರೆ ಎಲ್ಲವನ್ನು ಕೈ ಸನ್ನೆಯಿಂದಲೆ (ತಮ್ಸ್ ಅಪ್, ತಮ್ಸ್ ಡೌನ್) ತೋರಿಸಬೇಕು ಅಂತ ತಿಳಿಸಿಕೊಟ್ಟರು. ಮೊದ ಮೊದಲು ಈಜುಕೊಳದಲ್ಲಿ ಬಾಯಲ್ಲಿ ಕೊಳವೆಯಿಂದ ಉಸಿರಾಡಲು ಸ್ವಲ್ಪ ಕಷ್ಟವಾದರು ಕೂಡ ೨-೩ ತಾಸು ನಿರಂತರವಾಗಿ ಅಭ್ಯಾಸ ಮಾಡಿದ ಮೇಲೆ, ಸ್ಕೂಬ ಡೈವಿಂಗ್ ನಾನು ಕೂಡ ಮಾಡಬಹುದು ಎಂಬ ಆತ್ಮವಿಶ್ವಾಸ ಬಂತು.

ಸರಿ ಊಟವಾದ ಮೇಲೆ, ಮಧ್ಯಾಹ್ನ ನಿಗದಿತ ವೇಳೆಗೆ ಸಮುದ್ರದಲ್ಲಿ ಸ್ಕೂಬ ಡೈವಿಂಗ್ ಮಾಡಲು ಮೂವರು ಸಿದ್ಧರಾದೆವು. ನಾನು ಹಾಗು ಆರ್ಲಾನ್ ಹೊಸಬರಾಗಿದ್ದರಿಂದ ನಮ್ಮ ಜೊತೆ ನಮ್ಮ ತರಬೇತುದಾರ ಮೈಕ್ ಕೂಡ ಬಂದ...ಎಲ್ಲರೂ ಡೈವಿಂಗ್ ಸೂಟ್ ಹಾಕಿಕೊಂಡು , ಆ ಭಾರವಾದ ಸಾಮಗ್ರಿಗಳನ್ನು ಬೆನ್ನಿಗೆ ಕಟ್ಟಿಕೊಂಡು, ಏನೋ ಜಗತ್ತನ್ನೇ ಗೆದ್ದು ಬರುವ ಆತ್ಮವಿಶ್ವಾಸದೊಂದಿಗೆ ದೋಣಿಯಲ್ಲಿ ಹೊರಟೆವು. ಆ ದೋಣಿಯೋ ದಡದಿಂದ ಸುಮಾರು ೫-೬ ಮೈಲಿ ದೂರ ಪಯಣಿಸಿತು. ಸ್ವಲ್ಪ ಭಯ ಆವರಿಸಿತು...ನನಗೋ ದಡ ಕಾಣುತ್ತಲೇ ಇಲ್ಲ. ಎಲ್ಲ ಕಡೆ ನೀರು, ನೀರು, ನೀರು !! ದೋಣಿಯಿಂದ ಅಂಚಿನಲ್ಲಿ ಕುಳಿತಲ್ಲಿಂದಲೆ ಹಿಂದು ಮುಂದಾಗೆ ಬೀಳಬೇಕು ಅಂತ ಮುಂಚೆಯೇ ಹೇಳಿದ್ದರೂ ಕೂಡ, ಬೀಳುವಾಗ ನೋಡ್ಕೊಳ್ಳೋಣ ಅಂತ ಅದಕ್ಕೆ ಹೆಚ್ಚು ಗಮನ ಹರಿಸಿರಲಿಲ್ಲ. ಸರಿ ನಿಗದಿತ ಜಾಗ ಬಂದಾಗ ನಮ್ಮ ದೋಣಿಯ ನಾವಿಕ "ಜಂಪ್" ಅಂದ...ಟಾಮ್, ಆರ್ಲಾನ್, ಮೈಕ್ ಮೂವರು ಹಿಂದುಮುಂದಾಗಿ ನೀರಿಗೆ ಬಿದ್ದರು...ನಾನು ಭಯದಿಂದ ಜಗ್ಗಲೇ ಇಲ್ಲ. ಸರಿ ನಾವಿಕ ನನ್ನ ಬಳಿ ಬಂದು ನನ್ನನ್ನು ಸುಮ್ಮನೆ ಮುಂದಿನಿಂದ ಮುಟ್ಟಿದ, ಹಿಂಭಾರಕ್ಕೆ "ದಬಕ್" ಅಂತ ನೀರಿಗೆ ಬಿದ್ದೆ ! ನೀರಿಗೆ ಬಿದ್ದ ಮೇಲೆ ಧೈರ್ಯ ಬಂತು. ಕಣ್ಣಿಗೆ ನೀರು ಹೋಗದ ಕನ್ನಡಕಗಳನ್ನು ಹಾಕಿಕೊಂಡಿದ್ದರಿಂದ, ಕಣ್ಣನ್ನು ಬಿಡಬಹುದು ಎಂದು ತಿಳಿಸಿದ್ದರು. ಬಾಯಲ್ಲಿ ಕೊಳವೆ ಇಟ್ಟುಕೊಂಡು ಶುದ್ದವಾದ ಆಮ್ಲಜನಕ ಉಸಿರಾಡುತ್ತ, ಕಣ್ಣು ಬಿಟ್ಟುಕೊಂಡು ನೋಡುತ್ತ ಹೋಗುತ್ತಿದ್ದಂತೆ ಸುಮರು ೬೦-೭೦ ಅಡಿ ಕೆಳಗೆ ಎಳೆದುಕೊಂಡು ಹೋಗಿಯೇಬಿಟ್ಟ........




ನಮ್ಮ ತರಬೇತುದಾರ ಮೈಕ್, ನಾನು ಮತ್ತು ಆರ್ಲಾನ್ ಇಬ್ಬರೂ ಹೊಸಬರಾಗಿದ್ದರಿಂದ, ಇಬ್ಬರನ್ನೂ ಒಂದೊಂದು ಕೈಯಲ್ಲಿ ಹಿಡಿದುಕೊಂಡಿದ್ದ ಮೈಕ್. ನಮ್ಮ ಕ್ಲಯೆಂಟ್ ಟಾಮ್ ಎಲ್ಲಿ ಹೋದನೊ ಗೊತ್ತಿಲ್ಲ.
ಮೇಲೆ ಮಧ್ಯಾಹ್ನದ ಸೂರ್ಯ ಜೋರಾಗಿ ಇದ್ದು, ಅದರ ಕಿರಣ ಹಾಗು ಬೆಳಕು ಸಮುದ್ರದ ತಳವನ್ನು ಚೆನ್ನಾಗಿ ಬೆಳಗಿಸಿತ್ತು. ಸಮುದ್ರದ ಅಡಿಯಲ್ಲಿ ಇದ್ದ "ಕೋರಲ್ಸ್", ಅಖಂಡ ಜಲ ಪ್ರಾಣಿಗಳು. ಸಸ್ಯ - ರಾಶಿಗಳ ಸೌಂದರ್ಯವನ್ನು ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತ ೭೫ ಅಡಿ ಆಳದಲ್ಲಿ ಸುಖವಾಗಿ ತೇಲುತ್ತಿದ್ದ ನಾನು. ನಿಜವಾಗಿಯೂ ಬಾಯಿ ಬಿಟ್ಟು ಬಿಟ್ಟಿದ್ದೆ !!!!!!

ನನ್ನ ಆಕ್ಸಿಜನ್ ಕೊಳವೆ ಬಾಯಿಂದ ಹೊರ ಹಾರಿ ಹೋಗಿತ್ತು !!!!!! ಇನ್ನು ಉಸಿರಾಟ ಎಲ್ಲಿಂದ? ಸರಿ ಪ್ರಾಣ ಹೋಗುವುದು ನಿಶ್ಚಿತ ಅಂತೆನಿಸಿ ಭಯವಾದರೂ,ಜೀವ ಉಳಿಸಿಕೊಳ್ಳೋಕ್ಕೆ ಗಾಬರಿಯಿಂದ ಪಕ್ಕದಲ್ಲಿ ಕಾಣಿಸಿಕೊಂಡ ನಮ್ಮ ತರಬೇತುದಾರನಿಗೆ ಜೋರು ಜೋರಾಗಿ ಕೈಯಾಡಿಸುತ್ತ "ತಮ್ಸ್ ಅಪ್, ತಮ್ಸ್ ಅಪ್" ಮೂಲಕ ಮೇಲಕ್ಕೆ ಅತಿ ಬೇಗ ಹೋಗಬೇಕು ಅಂತ ಸೂಚನೆ ಮಾಡಿದೆ...ಅವನು ನನ್ನ ಬಾಯಿಂದ ಕೊಳವೆ ಹಾರಿಹೋಗಿದ್ದ ಕಂಡು ಇನ್ನು ೨೦ ಸೆಕೆಂಡುಗಳಲ್ಲಿ ಮೇಲೆ ಹೋಗದೆ ಇದ್ದರೆ ಮನುಷ್ಯ ದೇವರ ಪಾದ ಸೇರುವುದು ಖಂಡಿತ ಎಂದರಿತು ಆರ್ಲಾನ್ ಅನ್ನು ಅಲ್ಲಿಯೆ ಬಿಟ್ಟು, ನನ್ನನ್ನು ೭೦-೭೫ ಅಡಿ ಆಳದಿಂದ ಆದೆಷ್ಟು ಬೇಗ ಮೇಲಕ್ಕೆ ಎಳೆದು ಕೊಂಡು ಹೋದ, ನನ್ನ ಜೀವ ಉಳಿದಿದ್ದೆ ಹೆಚ್ಚು ! ನಮ್ಮ ಪೂಜ್ಯ ಅಜ್ಜಯ್ಯನವರ ಕೃಪೆ, ಹಿರಿಯರ ಆಶೀರ್ವಾದ, ಹೆಂಡತಿ ಉಷಾ ಹಾಗು ಮಕ್ಕಳಾದ ಸ್ನೇಹ, ಸುಹಾಸರ ಪ್ರೀತಿ ಹಾಗು ನಿಮ್ಮಂತಹ ಸ್ನೇಹಿತರ ಶುಭ ಹಾರೈಕೆಗಳೊಂದಿಗೆ ಇವತ್ತು ಈ ಲೇಖನವನ್ನು ಬರೆಯಲು ಮತ್ತೆ ಹುಟ್ಟಿ ಬಂದ ಈ ಪ್ರಸನ್ನ ಕುಮಾರ ! ತರಬೇತುದಾರ ಸ್ವಲ್ಪ ಎಚ್ಚರ ತಪ್ಪಿದ್ದರೂ ಅಥವಾ ಸ್ವಲ್ಪ ನಿಧಾನಿಸಿದ್ದರೂ, ಆ ದಿನ ಫಿಲಿಫಿನ್ಸ್ ಸಾಗರದಲ್ಲಿ ಒಂದು ದುರಂತವೇ ನಡೆದು ಹೋಗಿಬಿಡುತ್ತಿತ್ತು.

ಅಂದ ಹಾಗೆ, ಮೇಲೆ ಬಂದ ನಂತರ ೧೦ ನಿಮಿಷ ಸುಧಾರಿಸಿಕೊಂಡು, ಸರಿಯಾಗಿ ಉಸಿರಾಡಿ, ದೇವರಿಗೆ ಮನದಲ್ಲೇ ಸಾವಿರ ಬಾರಿ ನಮಸ್ಕರಿಸಿ ಮತ್ತೆ ಆ ಸಾಗರದೊಳಗಿನ ಅದ್ಭುತವನ್ನು ಸವಿಯಲು ಇನ್ನೊಮ್ಮೆ "ದಬಕ್" ಅಂತ ಧುಮುಕಿ ೧೦-೧೫ ನಿಮಿಷ ಆ ಸಾಗರದೊಳಗಿನ ಪ್ರಕೃತಿಯನ್ನು ಸವಿದು ಬಂದೆ.

ಆ ಸೌಂದರ್ಯವಂತೂ ಅವರ್ಣನೀಯ. ನೀವು ಕೂಡ ಸ್ಕೂಬ ಡೈವಿಂಗ್ ಕಲಿತು ಸಮುದ್ರದ ತಳದಲ್ಲಿರುವ ಜಲ ಪ್ರಾಣಿ ಸಸ್ಯ-ರಾಶಿಗಳ ಸೌಂದರ್ಯವನ್ನು ನೋಡಲೇಬೇಕು.......



Copyright © KCO – Brindavana


ಪುಟಾಣಿ ಪ್ರಪಂಚ

## ಕನ್ನಡ ಬಳಗದ ಚಿಣ್ಣರ ಲೋಕ

### ಕನ್ನಡ ಕಲಿಕೆ

ಬೃಂದಾವನ ಮಕ್ಕಳೋತ್ಸವದ ಕನ್ನಡ ವರ್ಣಮಾಲೆ ಸ್ಪರ್ಧೆಯ ವಿಜೇತ ಚಿತ್ರಗಳು


ಆಕಾಂಕ್ಷಾ ಲಂಬಿ(10 ವರ್ಷ)


ಅಭಿಜ್ಞ ಭಾರದ್ವಾಜ (8 ವರ್ಷ)

ಬೃಂದಾವನ ಮಕ್ಕಳೋತ್ಸವದ ಕನ್ನಡ ವರ್ಣಮಾಲೆ ಕಂಠಪಾಠ ಸ್ಪರ್ಧೆಯ ವಿಜೇತರು (4 - 6 ವರ್ಷ)

1.ಶ್ರೇಯಾ ರಾಘವೇಂದ್ರ
2.ಪ್ರಜ್ಞಾ ರಾವ್
3.ಮೇಘಾ ಕಿರಣ್

### ನಿಮಗೆಷ್ಟು ಗೊತ್ತು?

**ರಸ ಪ್ರಶ್ನೆಗಳು :**

1. ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಮಳೆಯಾಗುವ ಸ್ಥಳ ಯಾವುದು?
2. ಭಾರತದ ರಾಷ್ಟ್ರಪತಿಯಾದ ಕರ್ನಾಟಕ ಮೂಲದ ವ್ಯಕ್ತಿಯಾರು?
3. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಸ್ವರ ಅಕ್ಷರಗಳಿವೆ?
4. ಮೈಸೂರಿನ ವಿಶ್ವವಿಖ್ಯಾತ "ಕನ್ನಂಬಾಡಿ" ಅಣೆಕಟ್ಟನ್ನು ಕಟ್ಟಿದವರಾರು?
5.ಬೆಂಗಳೂರು ನಗರದ ಮೂಲ (ಮೊದಲ) ಹೆಸರೇನು?
6. ದ.ರಾ.ಬೇಂದ್ರೆಯವರ ಕಾವ್ಯನಾಮವೇನು?
7. ಕುವೆಂಪು ಹುಟ್ಟಿದ ಸ್ಥಳ ಯಾವುದು?
8. ಚಿತ್ರದುರ್ಗದ ಕಲ್ಲಿನ ಕೋಟೆಯ ಧೀರ ಮಹಿಳೆಯಾರು?
9. ಶ್ರೀಕೃಷ್ಣದೇವರಾಯರ ಆಸ್ಥಾನದಲ್ಲಿದ್ದ ವಿಖ್ಯಾತ ರಾಜಗುರುಗಳು ಯಾರು?
10. ಬೆಳಗಾವಿ ಯಾವ ಸಿಹಿ ಖಾದ್ಯಕ್ಕೆ ಪ್ರಖ್ಯಾತವಾಗಿದೆ?

**ನವೆಂಬರ್ ಸಂಚಿಕೆಯ ರಸ ಪ್ರಶ್ನೆಗಳಿಗೆ ಉತ್ತರ :**

1. ನವೆಂಬರ್ 1 ,1956
2. 8
3. ಶ್ರೀ ಕೆ.ಚೆಂಗಲರಾಯ ರೆಡ್ಡಿ
4. ಶ್ರೀರಾಮಾಯಣ ದರ್ಶನಂ
5. ಕವಿರಾಜಮಾರ್ಗ , ಆದಿಕವಿ ಪಂಪ
6. ಶ್ರೀಮತಿ ಬಿ.ಕೆ.ಸುಮಿತ್ರಾ
7. ಶಾಂತಿ , ಕ್ರಾಂತಿ
8. ಬೆಂಗಳೂರು
9. ಶ್ರೀ ಪುರಂದರದಾಸ
10. ಡಾ.ರಾಜ್ ಕುಮಾರ್

### ಚಿತ್ತಾರ

ಬೃಂದಾವನ ಮಕ್ಕಳೋತ್ಸವದ ವರ್ಣಚಿತ್ರ ಸ್ಪರ್ಧೆಯ ವಿಜೇತ ಚಿತ್ರಗಳು


ಸುದೀಪ್ತಾ ಮೂರ್ತಿ ( 9 ವರ್ಷ)


ಐರಾ ನವೀನ (6 ವರ್ಷ)


ಸನ್ಮಯಿ(5 ವರ್ಷ)

ಅನಘಾ ರಾವುತ್ (8 ವರ್ಷ)



ಸ್ಪಂದನ ರಾವ್ (10 ವರ್ಷ)


Copyright © KCO – Brindavana

ಸಂಚಿಕೆ ೧೨
ಜನವರಿ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ವನಿತಾ ವಾಣಿ

## ಕನ್ನಡ ಬಳಗದ ವನಿತೆಯರಿಗಾಗಿ

### ಲೇಖನ

**ಬಾಲ್ಯದ ದಿನಗಳು - ಅದೆಷ್ಟು ಸುಂದರ !!! - ಉಷಾ ಬಸ್ರೂರ**

**ನಾ ಕಂಡ ಯಕ್ಷಗಾನ ಬಯಲಾಟ . . . .**

"ಆಟ, ಆಟ, ಆಟ... ಇಂದು ರಾತ್ರಿ 9 ಘಂಟೆಗೆ ಗಾಂಧೀ ಮೈದಾನದಲ್ಲಿ ಸುಪ್ರಸಿದ್ಧ ...ಮೇಳದವರ 'ಭಸ್ಮಾಸುರ ಮೋಹಿನಿ' ಪ್ರಸಂಗ ನೋಡಲು ಮರೆಯದಿರಿ, ಮರೆತು ನಿರಾಶರಾಗದಿರಿ"....ಆಟೋ ದಲ್ಲಿ ಕುಳಿತು, ಮೈಕ್ ಹಿಡಿದು ನಮ್ಮೂರಿನ ಮುಖ್ಯ ರಸ್ತೆಯಲ್ಲಿ ಅಂದು ನಡೆಯಲಿರುವ ಯಕ್ಷಗಾನ ಬಯಲಾಟದ ಪ್ರಚಾರ ಜೋರಾಗಿ ನಡೆಯುತ್ತಿತ್ತು. ಆಗೆಲ್ಲ ಮನೋರಂಜನೆಗಾಗಿ ಈಗಿನ ತರಹ ಟಿವಿಯಾಗಲಿ, ಕಂಪ್ಯೂಟರ್ ಆಗಲಿ, ಇಂಟರನೆಟ್ ಆಗಲಿ ಇರಲಿಲ್ಲ, ಒಂದು ಸಿನೆಮಾ ನೋಡಲೂ ಪಕ್ಕದ ಊರಿಗೆ ಹೋಗಿ ಬರಬೇಕು, ಅದೂ ಮಕ್ಕಳು ನೋಡಬಹುದಾದಂಥ ಕಥೆ ಇರುವಂಥ ಚಿತ್ರ ಬಂದರೆ ವರ್ಷಕ್ಕೆ ಒಂದೋ ಎರಡೋ ನೋಡುವ ಅವಕಾಶ ಸಿಗುತ್ತಿತ್ತು. ಹಾಗಾಗಿ ಈ ಸ್ಥಳೀಯ ಮನರಂಜನೆಗಳಾದ ಬಯಲಾಟ, ನಾಟಕಗಳೆಲ್ಲ ಜನಪ್ರಿಯವಾಗಿದ್ದವು.

ಅಂದು ಸಂಜೆ ಶಾಲೆಯಿಂದ ಬಂದಾಕ್ಷಣ ಮರುದಿನದ ಪಾಠ/ಅಭ್ಯಾಸ ಗಳನ್ನೆಲ್ಲ ಮುಗಿಸಿ, ರಾತ್ರಿಯ ಊಟವನ್ನೂ ಮುಗಿಸಿ, ಮನೆಯ ಹಿರಿಯರೊಂದಿಗೆ ಬಯಲಾಟ ನೋಡಲು ಮೈದಾನಕ್ಕೆ ಪ್ರಯಾಣ! ಅಲ್ಲಿಯೋ ಆಗಲೇ ಸೇರಿದ ಜನ ಜಂಗುಳಿ, ಪೊಟ್ಟಣಗಲ್ಲಿ ಮಾರುತ್ತಿದ್ದ ಹುರಿದ ನೆಲಗಡಲೆ ಪರಿಮಳ, ನಡುವೆ ತೂರಿಕೊಂಡು, ಗ್ರಾಮದ ಪ್ರತಿಷ್ಠಿತ ವ್ಯಕ್ತಿ-ಗಳಿಗಾಗಿ ಕಾದಿರಿಸಿದ ಬೆಂಚು, ಕುರ್ಚಿಗಳಲ್ಲಿ ಉಳಿದ ಕೆಲ ಕುರ್ಚಿಯಲ್ಲಿ ಕೂತೆವು! ಎದುರಿಗೆ ಸ್ವಲ್ಪ ಖಾಲಿ ಜಾಗ, ಅಲ್ಲಿ ಆಗಲೇ ಮನೆಯಿಂದ ತಂದ ಚಾಪೆ, ಜಮಖಾನ ಹಾಸಿ ಆಟ ನೋಡಲು ಎಲ್ಲ ತಯಾರಿ ನಡೆದಿತ್ತು..



(ಯಕ್ಷಗಾನದ ಸಾಂಪ್ರದಾಯಿಕ ಉಡುಪಿನಲ್ಲಿ ಮಕ್ಕಳು)

ಜೋರಾಗಿ ಬಂದ ಚಂಡೆ, ತಾಳ, ಮದ್ದಳೆಯ ಸದ್ದಿಗೆ ಕಾದು, ಕಾದು ನಿದ್ರಾ ದೇವಿಯ ಮಡಿಲಿಗೆ ಸರಿದ ಮಕ್ಕಳೆಲ್ಲ ಬೆಚ್ಚಿಬಿದ್ದು , ಕಣ್ಣಗಲಿಸಿ ಆ ಅಸುರ ವೇಷಧಾರಿಯ ಪ್ರವೇಶ ನೋಡಲು ದಡಬಡಿಸಿ ಎದ್ದು ಕುಳಿತರು! ಬಡಗು ತಿಟ್ಟಿನ ವೇಷ ಭೂಷಣಗಳೇ ನೋಡಲು ಅತ್ಯಾಕರ್ಷಕ! ಮಧ್ಯೆ ಬಂದು ಹೋಗುವ ಪಾತ್ರಗಳಲ್ಲಿ ಹಾಸ್ಯಗಾರನ ಹಾಸ್ಯ, ವಿಭಿನ್ನ ಕುಣಿತ ಎಲ್ಲರನ್ನು ನಗೆಗಡಲಲ್ಲಿ ತೇಲಿಸುತ್ತದೆ. ಒಬ್ಬೊಬ್ಬ ಪ್ರಖ್ಯಾತ ವೇಷಧಾರಿಗೂ ಸಾಮಾನ್ಯವಾಗಿ ಅವರದ್ದೇ ಆದ ಒಂದು ವಿಶಿಷ್ಟ ನರ್ತನ ಶೈಲಿ ಇರುತ್ತದೆ, ಹಾಗೆಯೇ 'ಚಿಟ್ಟಾಣಿ' (ಪ್ರಸಿದ್ಧ ಯಕ್ಷಗಾನ ಕಲಾವಿದರು) ಅವರ 'ನವಿಲು ಕುಣಿಯುತಿದೆ ನೋಡಾ..' ಹಾಡಿನ ನರ್ತನ ಎಲ್ಲರಿಗೆ ಅಚ್ಚುಮೆಚ್ಚು, ಅದೆಷ್ಟು ಬಾರಿ ಹಾಡಿನ ಪುನರಾವರ್ತನೆ ಆದರೂ ಯಾರಿಗೂ ಬೇಸರ ತರದು, ಆ ನರ್ತನ ಶೈಲಿ ನಾನು ಇಂದಿಗೂ ಮರೆತಿಲ್ಲ!

ಮತ್ತೆ ಪುನಃ ಮಕ್ಕಳಿಗೆ ನಿದ್ರೆಯ ಅಮಲು, ಕೆಲ ಪ್ರಸಂಗಗಳು ಎಷ್ಟೇ ಆಕರ್ಷಕವಾಗಿದ್ದರೂ ರಾಜನೀತಿ, ಲೋಕಾಭಿರಾಮದ ಮಾತುಗಳೆಲ್ಲ ಎಳೆಯರಿಗೆ ಆಸಕ್ತಿ ಇಲ್ಲದವು. ಬೆಳಗಿನ ಜಾವ 'ಮಂಗಳಂ ಜಯ ಮಂಗಳಂ, ಶುಭ ಮಂಗಳಂ'.. ಅಂತ ಭಾಗವತರು ಹಾಡಿದಾಗಲೇ ಮತ್ತೆ ಎಚ್ಚರವಾದದ್ದು!! ಮುಂಜಾನೆಯ ನಸುಕಿನಲ್ಲಿ ಮನೆಯತ್ತ ಹೆಜ್ಜೆ ಹಾಕುವಾಗ ಭಾಗವತರ ಹಾಡು, ತಾಳ, ಚಂಡೆ, ಮದ್ದಳೆ ಹಿಂಬಾಲಿಸಿ ಬರುತ್ತಿತ್ತು...

ಹೆಚ್ಚಿನ ಪೌರಾಣಿಕ ಕಥೆಗಳೆಲ್ಲವೂ ಜನಸಾಮಾನ್ಯರಿಗೆ, ಮಕ್ಕಳಿಗೆ ತಿಳಿಯುತ್ತಿದ್ದುದು ಈ ಯಕ್ಷಗಾನ ಪ್ರಸಂಗಗಳ ಮೂಲಕವೇ, ಹಾಗೂ ಕೊನೆತನಕ ನೆನಪಿನಲ್ಲಿ ಉಳಿಯುವಂಥದು. ಆಟದ ಪ್ರಭಾವ ಎಷ್ಟಿತ್ತೆಂದರೆ, ಮರುದಿನ ಶಾಲೆಯಿಂದ ಬಂದು ಗಂಟಿ (ಹಸು, ಕರು) ಗಳನ್ನು ಗದ್ದೆಗೆ ಮೇಯಲು ಕರೆದೊಯ್ದು, ಅಲ್ಲಿ ಕೇರಿಯ ಮಕ್ಕಳೆಲ್ಲ ಸೇರಿ ಹಿಂದಿನ ದಿನದ 'ಭಸ್ಮಾಸುರ ಮೋಹಿನಿ'ಯ ಮರು ಪ್ರದರ್ಶನ! ಹಿರಿಯ ಮಕ್ಕಳಿಂದ ಪಾತ್ರಧಾರಣೆ. ವೇಷ ,ಒಣಗಿದ ಹುಲ್ಲಿನ ಕಟ್ಟು ಸೊಂಟದ ಸುತ್ತ.. ಬಣ್ಣ ,ಅಲ್ಲಿಯೇ ಇರುವ ಸೇಡಿ ಮಣ್ಣಿನ ಭಸ್ಮ! ಕಿರಿಯರೆಲ್ಲ ಪ್ರೇಕ್ಷಕರು. ಮತ್ತೆ ಕರೆತಂದ ದನ, ಕರುಗಳೆಲ್ಲ ಅಕ್ಕಪಕ್ಕದ ಗದ್ದೆಯಲ್ಲಿ!!!

ನಿಜ ,ಬಾಲ್ಯದ ದಿನಗಳು ಅದೆಷ್ಟು ಸುಂದರ!!!

### ಕವನ

**ಹೆಣ್ಣು . . . . . - ಲಕ್ಷ್ಮಿ ಕೊಲಾಲ**



ಅಕ್ಕರೆಯ ನಕ್ಕು ನಲಿವ ಅಮ್ಮ ಎಂಬ ಹೆಸರು...
ಅತ್ತೆಯಾದೊಡನೆ ಮನೆ ನಂದಗೊಕುಲದಂತೆ ಹಸಿರು..
ಆರೋಹಣವರಸುತ ನೀ ಜೀವನದ ಕೊನೆಯುಸಿರು...
ಇರುವ ಪುತ್ಥಳಿ ಹೆಣ್ಣೆಂಬ ಚಿಂತನದ ಚಿಗುರು.. !

ಇಚ್ಚೆಗಳನರಿತು ಬಾಳುವಾ ಅಳಲು ....
ಈರ್ಶೆಯಲೂ ಸಹಭಾಗಿಯಾದ ಒಡಲು...
ಉಂಟೇ ಸರಿಸಾಟಿಯಾದ ಇನ್ನೊಂದು ಮಡಿಲು..?
ಊರ್ವಶಿ ರಂಭೆಯರಿಲ್ಲದೇ ಸಾಗುವುದೇ ಪ್ರಣಯದ
ಹೊನಲು...?

ಋತುಗಳ ಬಣ್ಣದಂತೆ ಹೆಣ್ಣಿನ ಮನಸು...
ಮಿಡಿತಗಳ ಸಾಗರವೇ ಅದರ ಸೊಗಸು...
ಏಕಾಂಗಿಯಾದಾಗ ತುಂಬಿದ್ದರೂ ಯಶಸ್ಸು ...
ಆಭೂಷಣವೇ ನಿರಂತರದ ಕನಸು.... !

ಒಂದಾದ ಮನ ಕಾಣಲು ಹಿಗ್ಗುವ ಹೆಣ್ಣು...
ಓಡೋಡಿ ಬಂದ ಕಂದ ತಿಂದಂತೆ ಹಾಲು ಗಿಣ್ಣು...
ಅಂತರಂಗವನರಿತು ಬೆರೆತ ಜೀವನವು ಹಣ್ಣು,,,
ಅಹಂಕಾರವ ಸರಿಸಿ ಸಾಗು ನೀ ಬಿಡಿಸಿ ನಿನ್ನ ಕಣ್ಣು ..ಕಣ್ಣು..!!

(ಚಿತ್ರ: ಸರಿತಾ ನವಲಿ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




# ಕನ್ನಡ ಬಳಗದ ವನಿತೆಯರಿಗಾಗಿ.....

## ಲೇಖನ

### ಸೀರೆಯ ಸಿರಿ !! - ಉಷಾ ಸ್ವಾಮಿ

**ಸೀರೆ**ಯು ಪ್ರಪಂಚದ ಅತಿ ಹಳೆಯ, ಬಹುಶಃ ಈಗ ಉಳಿದಿರುವ ಹೊಲಿಯದಿರದ ಬಟ್ಟೆಯಾಗಿದೆ. ಇದು ಸ್ತ್ರೀಯರ ಸರ್ವಕಾಲೀನ ಉಡುಪು. ಸೀರೆಗಳು, ನಮ್ಮ ಹಿಂದು ಧರ್ಮದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.ಈ ಸೀರೆಯು ೫ ರಿಂದ ೮ ಮೀಟರ್ ಅಗಲವಾದ ಒಂದು ಏಕ ವಸ್ತ್ರ.ಇದನ್ನು ನಿಗದಿಯಾದ ಕ್ರಮದಲ್ಲಿ ಉಡುವ ಪದ್ದತಿಯನ್ನು ನಾವು ನೋಡುತ್ತೇವೆ.



ಸೀರೆಯು ಸ್ತ್ರೀಯರ ಅಂದವನ್ನು ಹೆಚ್ಚಿಸುವುದರಿಂದ ಇದನ್ನು ಒಂದು ಆಭರಣವೂ ಎನ್ನಬಹುದು.



ಏಕೆಂದರೆ ಯಾವ ಸುವರ್ಣಾಭರಣವು ಇಲ್ಲದೆ ಇದ್ದರೂ ಸೀರೆಯುಟ್ಟ ಸ್ತ್ರೀ ಅಂದವಾಗಿ ಕಾಣುತ್ತಾಳೆ. ಸೀರೆ ಉಡುವ ಇತಿಹಾಸವು ಸಾವಿರಾರು ವರುಷಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. ಸೀರೆ ಪದವು ಸಂಸ್ಕೃತದ 'ಷಟೀ' ಪದದಿಂದ ಬಂದಿದೆ.ಸೀರೆ ನಮ್ಮ ಹಬ್ಬ ಹರಿದಿನಗಳಲ್ಲಿ ಉಡುವಂತಹ ಅತಿ ಪ್ರಸಿದ್ಧವಾದ ಉಡುಗೆಯಾಗಿದೆ .

ಇತಿಹಾಸಕಾರರು ಸೀರೆಯ ಉಗಮವನ್ನು ಸುಮಾರು ಕ್ರಿ.ಪೂ ೧೫೦೦ಕ್ಕೆ ಕೊಂಡೊಯ್ದಿದ್ದಾರೆ.ಇದನ್ನು ಮೊದಲು ಋಗ್ವೇದದಲ್ಲಿ ಬಣ್ಣಿಸಲಾಗಿದೆ.ಆಗಿನ ಕಾಲದಲ್ಲಿ ಸೀರೆ ಉಡುವುದು ಅವರವರ ಅದಾಯ ಹಾಗು ಕೆಲಸದ ವರ್ಗಕ್ಕೆ ತಕ್ಕಂತೆ ಹಾಗು ಆಯಾ ಪ್ರಾಂತ್ಯಕ್ಕೆ ಸರಿಹೋಗುವ ಹಾಗೆ ಇರುವುದನ್ನು ನೋಡಬಹುದು.



ಅತಿ ಶ್ರೀಮಂತರು ಎರಡು ಉದ್ದವಾದ ಬಟ್ಟೆಯನ್ನು ಉಡುತ್ತಿದ್ದರು.ಒಂದು ಮೇಲ್ಭಾಗದ ಶರೀರಕ್ಕೆ ಹಾಗು ಮತ್ತೊಂದು ಕೆಳಭಾಗದ ಶರೀರಕ್ಕೆ. ಮತ್ತೆ ಕೆಲವರು ತಮ್ಮ ಮೇಲ್ಭಾಗದ ಶರೀರಕ್ಕೆ ಶಲ್ಯದ ರೂಪದ ಬಟ್ಟೆಯನ್ನು ಉಡುತ್ತಿದ್ದರು.ಕೆಳಗಿನ ಭಾಗದ ಬಟ್ಟೆಗೆ ಕೆಲವು ನೆರಿಗೆಗಳನ್ನು ಹಿಡಿದು ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದರು.

ಪ್ರಮುಖ ಹಬ್ಬಗಳಲ್ಲಿ ಹಾಗು ಮದುವೆ-ವಾರ್ಷಿಕೋತ್ಸವ, ನಾಮಕರಣ ಇತರೆ ಶುಭ ಸಮಾರಂಭದಲ್ಲಿ ಹೊಸ ಸೀರೆಯನ್ನು ಖರೀದಿಸುವುದು ಹಾಗು ಉಡುಗೊರೆ ಕೊಡುವುದು ಈಗಲೂ ರೂಢಿಯಲ್ಲಿದೆ.ಹಿಂದೂಗಳ ಮದುವೆಯಲ್ಲಿ, ವಧು ಒಂದು ಸುಂದರ ಸೀರೆ ಧರಿಸದ ಹೊರತು , ಭಾರತೀಯ ಮದುವೆ ಪೂರ್ಣವಾಗುವುದಿಲ್ಲ. ವಧುವಿನ ಸೀರೆಯನ್ನು ಮುಂಚಿತವಾಗಿಯೇ ಖರೀದಿರಿಸುತ್ತಾರೆ.

ಸೀರೆ ಉಡುವ ವಿಧಾನದಲ್ಲಿ ಉತ್ತರ ಭಾರತ ಹಾಗು ದಕ್ಷಿಣ ಭಾರತದಲ್ಲಿ ವೈವಿಧ್ಯೆತೆಯನ್ನು ಕಾಣಬಹುದು.ಅತಿ ಪ್ರಸಿದ್ಧವಾದ ಸೀರೆಗಳಲ್ಲಿ ಬೆನಾರಸ್ ಸೀರೆ, ಮೈಸೂರ್ ಸಿಲ್ಕ್, ಕಲ್ಕತ್ತ ಕಾಟನ್, ಚಿಫಾನ್ ಮತ್ತು ಜಾರ್ಜೆಟ್ ಸೀರೆಗಳನ್ನು ಹೆಸರಿಸಬಹುದು.ಪ್ರತಿಯೊಂದು ಸೀರೆಗೂ ಅದರದೆ ಆದ ವಿಶೇಷ ಬಣ್ಣ, ವಿನ್ಯಾಸ ಹಾಗು ಕಥೆ ಇರುತ್ತದೆ.

ಕಾಲಕ್ಕೆ ತಕ್ಕಂತೆ ನಮಗೆ ಈಗ ಪಾಶ್ಚ್ಯತ್ಯ ಉಡುಗೆಯ ಪ್ರಭಾವ ಅತಿಯಾಗಿದ್ದರೂ ಕೂಡ ನಾವು ಸೀರೆಯ ಹಿರಿಮೆಯನ್ನು ಈಗಲೂ ಕಾಣಬಹುದು.

**(ಮಾಹಿತಿಯ ಅಂಶಗಳು ಮತ್ತು ಚಿತ್ರಕೃಪೆ : ಅಂತರ್ಜಾಲ)**

## ಮನೆ ಮದ್ದು

ಚಳಿಗಾಲದಲ್ಲಿ ಕಂಡುಬರುವ ಗಂಟಲು ನೋವು ಮತ್ತು ಗಂಟಲು ಕೆರೆತಗಳ ನಿವಾರಣೆಗೆ , ಒಂದು ಲೋಟ ನೀರನ್ನು ಕುದಿಸಿ, 2 ಚಿಟಿಕೆ ಅರಿಶಿನ ಪುಡಿ, 1 ಚಿಟಿಕೆ ಉಪ್ಪು ಬೆರೆಸಿ, ಮತ್ತೆ ಸ್ವಲ್ಪ ಸಮಯ ಕುದಿಸಿ, ಬಿಸಿ ಆರುವ ಮುನ್ನ ಕುಡಿಯಬೇಕು. ದಿನಕ್ಕೆ ಎರಡು ಬಾರಿ ಸೇವಿಸಬಹುದು.

## ಸವಿರುಚಿ

**ಕೇಕ್** (ಮೊಟ್ಟೆ ರಹಿತ)- ದೀಪ್ತಿ ಗಡ್

**ಬೇಕಾಗುವ ಪದಾರ್ಥಗಳು :**

1 ಕಪ್ ಗಟ್ಟಿ ಮೊಸರು
3/4 ಕಪ್ ಸಕ್ಕರೆ
1.25 ಟೀ ಚಮಚ ಬೇಕಿಂಗ್ ಪೌಡರ್
1/2 ಟೀ ಚಮಚ ಬೇಕಿಂಗ್ ಸೋಡಾ
1/2 ಕಪ್ ಅಡುಗೆ ಎಣ್ಣೆ
1.5 ಕಪ್ ಮೈದಾ ಹಿಟ್ಟು

**ವಿಧಾನ:**

ಪಾತ್ರೆಯಲ್ಲಿ ಮೊಸರು, ಸಕ್ಕರೆ, ಬೇಕಿಂಗ್ ಪೌಡರ್ ,ಬೇಕಿಂಗ್ ಸೋಡಾಗಳನ್ನು ಚೆನ್ನಾಗಿ ಬೆರೆಸಿ. ನೊರೆ ಬರುವಂತೆ ಮಿಶ್ರಣ ಮಾಡಿಕೊಳ್ಳಿ. ಈ ಮಿಶ್ರಣಕ್ಕೆ 1/2 ಕಪ್ ಅಡುಗೆ ಎಣ್ಣೆ ಬೆರೆಸಿ, ಚೆನ್ನಾಗಿ ಮಿಶ್ರ ಮಾಡಿ. ನಂತರ ಈ ಮಿಶ್ರಣಕ್ಕೆ 1.5 ಕಪ್ ಮೈದಾಹಿಟ್ಟನ್ನು ಸೇರಿಸಿ, ಚೆನ್ನಾಗಿ ಬೆರೆಸಿ.

ಬಿಸಿಮಾಡಿದ (ಪ್ರೀ ಹೀಟೆಡ್) ಒವನ್ ನಲ್ಲಿ 350 ಡಿಗ್ರಿ ಫ್ಯಾರೆನ್ ಹೀಟ್ ಉಷ್ಣತೆಯಲ್ಲಿ 25 ನಿಮಿಷ ಬೇಯಿಸಿ. ಕೇಕ್ ಬೆಂದಿರುವುದನ್ನು ತಿಳಿಯಲು ಟೂಥಪಿಕ್ ನಿಂದ ಪರೀಕ್ಷಿಸಬೇಕು. ಈ ಕೇಕಿಗೆ ಟೂಟಿ-ಫ್ರೂಟಿ ಮತ್ತು ಇತರ ಎಸೆನ್ಸ್ ಗಳನ್ನು ಬೆರೆಸಬಹುದು.




Copyright © KCO – Brindavana

ವನಿತಾ ವಾಣಿ

# ಕನ್ನಡ ಬಳಗದ ವನಿತೆಯರಿಗಾಗಿ.....

## ಸುಂದರ ಸಂಪ್ರದಾಯ





ರಂಗೋಲಿ: ಕು.ಅಭೀಷ್ಟಾ ತಂತ್ರಿ(14 ವರ್ಷ)



ಕ್ರಿಸ್ ಮಸ್ ಗಿಡದ ಅಲಂಕಾರ :
ಕು.ಸಿರಿ ತೈಲಗೇರಿ(8 ವರ್ಷ)
ಕು.ನೇಹಾ ತೈಲಗೇರಿ (14 ವರ್ಷ)

## ಹಸಿಗವನ

**ಪುದೀನಾ... .... ದಿನ ದಿನಾ....**

- ಲಕ್ಷ್ಮಿ ಕೊಲಾಲ



ನಮ್ಮ ನೆಚ್ಚಿಯ ಪುದೀನಾ.....
ಓ ನೀನೆಷ್ಟು ಸುವಾಸನ.....
ನಿನ್ನ ಸೇವನೆ ದಿನ ದಿನಾ...
ಹಿಂದಾಗುವುದೆಲ್ಲರ ಅಜೀರ್ಣ...
ನಿನ್ನ ಕರೆಯುವರೆಲ್ಲ ಗಾರ್ಡನ್ ಮಿಂಟ್...
ಜೀವ ತೆಳೆಯುವುದೊಂದು ಹೊಸ ಟಿಂಟ್..
ನಿನ್ನಲ್ಲಿರುವ ಬಹುಮಾತ್ರ ನಯಾಸಿನ್...
ಕೊಡುವುದೆಲ್ಲರಿಗೂ ಯಥೇಚ್ಛ ವಿಟಮಿನ್....
ನಿನಗೆ ಬೆರೆಸಿದಾಗ ಜೇನುತುಪ್ಪ....
ತಾಳುವೆ ನೀನೊಂದು ಹೊಸ ರೂಪ....
ನೀ ಸೇರಿದಾಗ ಸವಿಯಾದ ಉಪ್ಪು ತುಪ್ಪ....
ಭೋಜನವೆಷ್ಟು ಓರಣ ಒಪ್ಪ....
ಓ ನಮ್ಮ ನೆಚ್ಚಿನ ಪುದೀನಾ......
ನೀ ಹಸಿರ ಸಿರಿ ದಿನ ...ದಿನಾ......!!

## ಪ್ರತಿಭೆ



**ಪ್ರಿಯಾಂಕಾ ಕಲ್ಲೂರ್**

ಪ್ರಿಯಾಂಕಾ ಕಲ್ಲೂರ್ ಅತ್ಯಂತ ಪ್ರಬುದ್ಧ ಹಾಗು ಕಠಿಣ ಪರಿಶ್ರಮದ ಪ್ರತಿಭಾವಂತ ವಿದ್ಯಾರ್ಥಿನಿ. ಅವರು ನ್ಯೂ ಜೆರ್ಸಿಯ ಎಡಿಸನ್ ನ ಮೆನ್ಲೋ-ಪಾರ್ಕ್ ಎಲಿಮೆಂಟರಿ ಶಾಲೆ ಮತ್ತು ಜೆಪಿ ಸ್ಟೀವನ್ಸ್ ಶಾಲೆಗಳಲ್ಲಿ ಓದಿದ್ದಾರೆ. ಹಲವಾರು ಹುಡುಗಿಯರು ಹದಿನಾರನೆ ವಯಸ್ಸನ್ನು ಎದಿರು ನೋಡುವಾಗ, Sweet -16 ಪಾರ್ಟಿಯ ಕನಸುಗಳನ್ನು ಕಾಣುವುದು ಸಹಜ. ಆದರೆ, ಪ್ರಿಯಾಂಕಾ ಕಲ್ಲೂರ್ ತನ್ನ 16 ನೇ ವರ್ಷಕ್ಕೆ ಸಂಪೂರ್ಣವಾಗಿ ಬೇರೆಯ ಉದ್ದೇಶದಿಂದ ಗಮನ ಸೆಳೆದಿದ್ದಾರೆ. ಈ ಉದ್ದೇಶದಿಂದಾಗಿ ಜೆಪಿ ಸ್ಟೀವನ್ಸ್ ಶಾಲೆಯ Prom ಮತ್ತು Graduation ತಪ್ಪಿಸಿಕೊಂಡು Bard College at Simon's Rock in Massachusetts ನಲ್ಲಿ ಸ್ಥಾನ ಪಡೆದಿದ್ದಾರೆ. ಈ ಕಾಲೇಜಿನ ವೈಶಿಷ್ಟ್ಯವೆಂದರೆ ಸುಮಾರು ನಾಲ್ಕುನೂರ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರತಿ ವರ್ಷ ಅತ್ಯಂತ ಪರಿಶ್ರಮದಿಂದ ಕಠಿಣ ಪರೀಕ್ಷೆಯನ್ನು ಎದುರಿಸಿ ಸಮಕಾಲೀನ ವಿದ್ಯಾರ್ಥಿಗಳಿಗಿಂತ ಎರಡು ವರ್ಷ ಮುಂಚಿತವಾಗಿ ಪದವಿ ಪಡೆಯುತ್ತಾರೆ. ವೈದ್ಯಳಾಗುವ ಗುರಿಯನ್ನು ಹೊಂದಿರುವ ಪ್ರಿಯಾಂಕಾ, ನ್ಯೂ ಜೆರ್ಸಿಯ ಎಡಿಸನ್ನಿನ ಅಶೋಕ್ ಕಲ್ಲೂರ್ ಮತ್ತು ಶ್ರೀಲಕ್ಷ್ಮಿ ನಾಗೇಂದ್ರ ಅವರ ಪುತ್ರಿ. Bard College ನಲ್ಲಿ ಓದುವುದಕ್ಕೆ ಬಹಳ ಸಂತಸ ವ್ಯಕ್ತಪಡಿಸುತ್ತಾರೆ. ಹಲವು ಸವಾಲುಗಳನ್ನು ಎದುರಿಸಿಯೂ ,ಸಾಧನೆಯ ನಿರ್ದಿಷ್ಟ ಗುರಿಯನ್ನು ಹೊಂದಿರುವ ಈ ಕನ್ನಡದ ಹುಡುಗಿಗೆ 'ಬೃಂದಾವನ ವಾಣಿ'ಯ ಪರವಾಗಿ ಶುಭ ಹಾರೈಕೆಗಳು.


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಸುತ್ತ ಮುತ್ತ....

### ಮಾನವೀಯತೆ ಮೆರೆದ ಕನ್ನಡದ ಕಟ್ಟೆ ಹುಡುಗರು. . .

**-ಸಂತೋಷಕುಮಾರ್ ಕಡ್ಲೆಬೇಳೆ**

ದಶಕದಿಂದ ತಾಯ್ನಾಡನ್ನು ಬಿಟ್ಟು ವಿದೇಶದಲ್ಲಿ ನೆಲೆಸಿದ ನಮಗೆ ' ಕಟ್ಟೆ ಹುಡುಗರು' ಎಂದಾಕ್ಷಣ ತಕ್ಷಣ ನೆನಪಿಗೆ ಬರುವುದು ನಮ್ಮ ತಾರುಣ್ಯದ ಕೆಲವು ದೃಶ್ಯಾವಳಿಗಳು. ಒಂದು ಹಳ್ಳಿಯ ಮಧ್ಯದಲ್ಲಿರುವ ಒಂದು ದೊಡ್ಡ ಆಲದಮರ ಅಥವಾ ಅರಳಿಮರದ ಕಟ್ಟೆಯ ಮೇಲೆ ಬೆಳಿಗ್ಗೆ ಮತ್ತು ಸಂಜೆ ಬಂದು ಸೇರುವ ಪದವಿ ಮುಗಿಸಿ ನೌಕರಿ ತಲಾಶೆಯಲ್ಲಿರುವ ನಮ್ಮ ಹಳ್ಳಿ ಹುಡುಗರು. ಕಟ್ಟೆ ಹುಡುಗರು ಪ್ರತಿದಿನ ಸೇರಿ ಹರಟೆ ಹೊಡೆದು ಮುಸ್ಸಂಜೆಯಲ್ಲಿ ರಾಮಣ್ಣನ ಅಂಗಡಿಯಲ್ಲಿ ಚಾ ಕುಡಿದು, ರಾತ್ರಿ ೮ ಗಂಟೆಗೆ ಇಸ್ಮಾಯಿಲ್




ಸಾಬಿಯ night halt ಬಸ್ ಗೆ ಟಾ ಟಾ ಮಾಡುತ್ತಾ ತಮ್ಮ ಭಾಗ್ಯದ ಕನಸನ್ನು ನನಸಾಗಿಸುವ ಭರವಸೆಯ ಭಾರದ ಹೆಜ್ಜೆ ಇಡುತ್ತಾ ಮನೆ ಸೇರುವುದು.

ಇಂತಹ ಹಲವಾರು ಕನಸುಗಾರರು ತಮ್ಮ ಕನಸನ್ನು ನನಸಾಗಿಸಿ ವಿದೇಶದಲ್ಲಿ ಸೇರಿಕೊಂಡು ಕಳೆದ ಅಗಸ್ಟ್ ನಲ್ಲಿ ೪ ನೆ ವರ್ಷ ಪೂರೈಸಿದ ನಮ್ಮ ನ್ಯೂ ಜೆರ್ಸಿಯ ಕನ್ನಡದ ಕಟ್ಟೆ ಹುಡುಗರು Dayton ನ summerfield ನಲ್ಲಿ ತಮ್ಮ ಕಟ್ಟೆ ತಾಣವಾಗಿಸಿಕೊಂಡು ಕ್ರಿಕೆಟ್ ಮತ್ತು ವಾಲಿಬಾಲ್ ಆಟ ಆಡುತ್ತ ಕಳೆದ ಒಂದು ವರ್ಷದಿಂದ ಸುಮಾರು ೩-೪ ಸಾರ್ವಜನಿಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಅಭಿನಂದನಾರ್ಹ.

ಎಡಿಸನ್ನಲ್ಲಿರುವ ' Ozanam Family Shelter ' , ನೆಲೆಯಿಲ್ಲದವರಿಗೆ ಆಶ್ರಯ ನೀಡುವ ಒಂದು ಸಂಸ್ಥೆ. ವೈಯಕ್ತಿಕ ಅಥವಾ ವ್ಯವಹಾರಿಕವಾಗಿ ತೊಂದರೆಗೆ ಸಿಲುಕಿ ಜೀವನ ಸಾಗಿಸಲು ಸರಿಯಾದ ದಾರಿ ಕಾಣದೆ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ನೊಂದವರು ಇಂಥಹ ಸಂಸ್ಥೆಯ ಆಶ್ರಯ ಪಡೆಯುತ್ತಾರೆ. ಅಮೇರಿಕಾದಂತಹ ಶ್ರೀಮಂತ ರಾಷ್ಟ್ರದಲ್ಲಿಯೂ ಇಂತಹ ನಿದರ್ಶನಗಳು ಆಶ್ಚರ್ಯ ಮತ್ತು ಅಚ್ಚರಿ ಮೂಡಿಸುತ್ತವೆ.

ಕಟ್ಟೆ ಹುಡುಗರು ಮೊನ್ನೆ ನವೆಂಬರ್ ನ ಕೊನೆ ವಾರ ತಮ್ಮ ಮಕ್ಕಳು ಮತ್ತು ಕುಟುಂಬ-ದವರೊಂದಿಗೆ ಅಲ್ಲಿಗೆ ತೆರಳಿ, ವಿಧ ವಿಧದ ಸ್ಯಾಂಡ್ ವಿಚ್, ಪಾಸ್ತಾ, ಸಲಾಡ್, ಕೇಕ್ ತಯಾರಿಸಿ, ಅಲ್ಲಿಯ ನೊಂದವರಿಗೆ ವಿತರಿಸಿ, ಉಪಚರಿಸಿ, ಮಾನಸಿಕವಾಗಿ ಧೈರ್ಯ ತುಂಬಿದ್ದು ಗಮನಾರ್ಹ. ತಮ್ಮ



ಚಿಕ್ಕ ಚಿಕ್ಕ ಮಕ್ಕಳನ್ನು ಇಂತಹ ಒಂದು ಮಹತ್ವದ ಕಾರ್ಯಕ್ರಮದಲ್ಲಿ ತೊಡಗಿಸಿ ಅವರಿಗೆ ಶಿಕ್ಷಣ, ಕ್ರೀಡೆ, ಸಂಸ್ಕೃತಿಯ ಜೊತೆಗೆ ಜೀವನದ ಮಹತ್ವ, ಎಲ್ಲಕಿಂತ ಹೆಚ್ಚಾಗಿ ಸಹಾಯ ಹಸ್ತ, ಸರಿ ತಪ್ಪುಗಳ ಮಾರ್ಗದರ್ಶನ ತೋರಿಸಿ ಮಾದರಿಯಾಗಿರುವುದು ಒಂದು ಹೆಮ್ಮೆಯ ವಿಷಯ.

ಕಟ್ಟೆ ಹುಡುಗರು ತಮ್ಮ ಕೈಲಾದಷ್ಟು ಸಮಾಜ ಸೇವೆ ಮಾಡಿ, ಮಾನವೀಯತೆ ಮೆರೆದು ಯಾವುದೇ ಸಂಘ-ಸಂಸ್ಥೆ ಅಥವಾ ಯಾವುದೇ ಜಾತಿ-ಮತ-ರಾಜಕೀಯಕ್ಕೆ ಅವಲಂಬಿಸದೆ 'ಮನಸ್ಸಿದ್ದರೆ ಮಾರ್ಗ' ಎಂದು ಇತರರಿಗೆ ಮಾದರಿಯಾಗಿರುವುದು ಪ್ರಶಂಸನೀಯ. ಮುಂದಿನ ವರ್ಷ 'ಮಾರ್ಚ್-ಎಪ್ರಿಲ್' ನಲ್ಲಿ ಕರ್ನಾಟಕದಿಂದ ಕೆಲವು ನುರಿತ ಕಲಾವಿದರನ್ನು ಕರೆಸಿ ಸಾಂಸ್ಕೃತಿಕ, ಮನರಂಜನೆ ಜೊತೆಗೆ ರಸಮಂಜರಿ ಕಾರ್ಯಕ್ರಮ ಮುಖಾಂತರ fund raise ಮಾಡಿ ಕರ್ನಾಟಕದಲ್ಲಿರುವ ಬಡ ಮಕ್ಕಳಿಗೆ ಶಿಕ್ಷಣ, ವಸತಿ ಮತ್ತು ಊಟದ ವ್ಯವಸ್ಥೆ ಮಾಡಲು ಯೋಜನೆಗೆ ರೂಪು ರೇಷೆ ಗಳನ್ನು ಹಾಕಿ ಕೊಳ್ಳುತ್ತಿರುವ ನಮ್ಮ ಕನ್ನಡದ ನ್ಯೂ ಜೆರ್ಸಿ ಕಟ್ಟೆ ಹುಡುಗರ ಬಳಗಕ್ಕೆ ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದವೇ ಶ್ರೀರಕ್ಷೆ.

## ಕ್ಯಾಮೆರಾ ಕಣ್ಣಿಂದ....

### ಸುಂದರ ಕರ್ನಾಟಕ !!!!

ಛಾಯಾಚಿತ್ರಗಳು : ಡಾ. ರಾಜು ಮುತ್ತು









Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಹಾಗೆ ಸುಮ್ಮನೆ....

**ಪ್ರೇಮಿಗಳ ದಿನ . . . . ಬೃಂದಾವನ ಅಕ್ಷರ ಭಂಡಾರದ ಸದಸ್ಯರಿಂದ ಹನಿಗವನಗಳು.**

ನನ್ನ ನಲ್ಲೆ
ಪ್ರೇಮದ ದಿನ
ಪ್ರೀತಿಯ
ನಾ ಒಲ್ಲೆ ಎಂದಳಲ್ಲೆ!!!
ಒಲ್ಲೆ ನಾ ಅವಳ ಮನದಾಳವ
ತಂದೆ ಅವಳಿಗೆ ಹವಳದ ಹಾರವ
ಉಕ್ಕಿತಲ್ಲೆ ಸಂತೋಷದ ಜ್ವಾಲವ
ಕೊಟ್ಟಳಲ್ಲೆ ಕೊನೆಗೂ ಪ್ರೀತಿಯ ಸಾರವ..
**- ರಾಘವೇಂದ್ರ ಕುಂದಲಗುರ್ಕಿ**

ಓದಲು ಕೇಳಲು ಹಿತವಾಗಿದೆಯಂತೆ
ಯುವಜನರ ವ್ಯಾಲೆಂಟೈನ್ ಕಂತೆ
ಕಿರಿಯರಾಗುವೆವು ನಾವು ನಿಮ್ಮಲ್ಲಿ ಬೆರೆತು
ಕಾಣುವೆವು ಹಳೆಯದನು ಮತ್ತೊಮ್ಮೆ ಕಲೆತು !!

**-ವಿ. ಪ್ರಸನ್ನ ಕುಮಾರ್**

ತಪ್ಪಾಗಿ ತಿಳಿದೆಯಲ್ಲ ನನ್ನ ಮನದಾಳವ,
ತಪ್ಪಾಗಿ ತಿಳಿದೆಯಲ್ಲ ನನ್ನ ಮನದಾಳವ
ರತುನದ ಬದಲು ತಂದೆಯಲ್ಲ ಹವಳವ
**-ಶ್ರೀಪರ್ಣಿಕಾ ಕಂಚಿ**

ಇಂದು ಅದೇನೋ ವ್ಯಾಲೆಂಟೈನ್ಸ್ ಡೇ ಅಂತೆ,
ಊರೆಲ್ಲಾ ಕೆಂಪು ರೋಜಾ ಹೂಗಳಾ ಸಂತೆ,
ನಾನೂ ತಂದೆ ನನ್ನವಳಿಗೊಂದು ರೋಜಾ ಕಂತೆ,
ಮಡದಿ ತಾನೆಂದು ಮರೆತು ತಬ್ಬಿದಳು
ಪ್ರಿಯತಮೆಯಂತೆ!!!

**-ವಿನೋದ್ ಶಾಮಸುಂದರ್**

ಪ್ರೇಮ ನಿವೇದಿಸಲು
ಬೇಕೇನು ದಿನವೊಂದು;
ಅಂತರಾಳದ ತುಂಬ ಪ್ರೀತಿ ತುಂಬಿರಲು|
ಸಾಕು ಆತ್ಮೀಯ ಭಾವನೆಯ ನೋಟವೊಂದು;
ಸಂಗಾತಿ ತನ್ನನು ಅರ್ಪಿಸಿಕೊಳಲು||
**- ಸರಿತಾ ನವಲಿ**

ಇಂದು ಪ್ರೀತಿಯ ದಿನ
ಹೆಚ್ಚೆಚ್ಚು ಪ್ರೀತಿಸಲು ಸುದಿನ
ಕಳೆದುಕೊಂಡ ಪ್ರೀತಿಯನು ಪಡೆಯಲು ಸುದಿನ
ಮೀಸಲಾಗಿಡಬೇಡಿ ಪ್ರೀತಿ ಹಂಚಲು ಬರೀ ಈದಿನ
ಪ್ರೀತಿಹೊಳೆ ಹರಿಯಲಿ ಅನುದಿನ ಪ್ರತಿದಿನ !!
**- ಅಹೀಶ್ ಭಾರದ್ವಾಜ**


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕನ್ನಡ ಕೂಟದ ಮುಂಬರುವ ಚಟುವಟಿಕೆಗಳು




**ನವೆಂಬರ್ ಸಂಚಿಕೆಯಲ್ಲಿನ ತಿದ್ದುಪಡಿ :**

1.'ಸುಂದರ ಸಂಪ್ರದಾಯ' ಮತ್ತು 'ಕ್ಯಾಮೆರಾ ಕಣ್ಣಿಂದ' ಅಂಕಣಗಳಲ್ಲಿ ಛಾಯಾಚಿತ್ರಗಳೆನ್ನುವ ಕಡೆ ವರ್ಣಚಿತ್ರಗಳೆಂದು ಮುದ್ರಿತವಾಗಿದೆ.

2.'ಚಿಣ್ಣರ ಲೋಕ' ಕ್ಕೆ ವರ್ಣಚಿತ್ರಗಳನ್ನು ಬರೆದು ಕಳುಹಿಸಿದ ಮಕ್ಕಳ ವಯಸ್ಸನ್ನು ನಮೂದಿಸಿರಲಿಲ್ಲ. ಕ್ಷಮಿಸಿ.

'ಚಿಣ್ಣರ ಲೋಕ' ಕ್ಕೆ ವರ್ಣಚಿತ್ರಗಳನ್ನು ಬರೆದು ಕಳುಹಿಸಿದ ಮಕ್ಕಳು :

1.ಸ್ಪಂದನ ರಾವ್ (10 ವರ್ಷ)
2.ಅಭಿಜ್ಞ ಭಾರದ್ವಾಜ (8 ವರ್ಷ)
3. ಶ್ರೇಯಾ ರಾಘವೇಂದ್ರ(6 ವರ್ಷ)
4. ಅಪ್ರಮತ್ತ ಭಾರದ್ವಾಜ (8 ವರ್ಷ)

**-ಬೃಂದಾವನ ವಾಣಿ ಸಂಪಾದಕ ಮಂಡಳಿ**

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಒಳಗೆ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿಧ್ಯಾರ್ಥಿ ಸದಸ್ಯತ್ವಗಳಲ್ಲಿ ನಿಮಗೆ ಸೂಕ್ತವಾದ ಸದಸ್ಯತ್ವ ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ, www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ, ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ, ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.

ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.

ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂ ಜೆರ್ಸಿಯ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ .ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ,ನಾಕಂಡಂತೆ, ಯುವ ವಾಣಿ. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.

**ನಾಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.

ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana